ಸಂಪುಟ : 9 ಸಂಚಿಕೆ 12 ಪುಟ : 4 ಬೆಲೆ : 3.00 ಗುರುವಾರ ಫೆಬ್ರವರಿ 8, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 12 Pages : 4 Price : 3.00 Thursday February 8, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ದಿ ಕೆ.ಎಚ್. ಪಾಟೀಲರ ಪುಣ್ಯತಿಥಿ ನಾಳೆ



■ ವಿಜಯಸಾಕ್ಷಿ ಸುದ್ದಿ, ಗದಗ

ಫೆ.9ರ ಬೆಳಿಗ್ಗೆ 9 ಗಂಟೆಗೆ ನಗರದ ದಿ.ಗದಗ ಕೋ-ಆಪ್ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿರುವ ಸಹಕಾರಿ ರಂಗದ ಭೀಷ್ಮ ದಿ ಕೆ.ಎಚ್. ಪಾಟೀಲರ ಪುತ್ಥಳಿಯ ಮುಂದೆ ಅವರ ಪುಣ್ಯತಿಥಿಯ ಕಾರ್ಯಕ್ರಮದ ನಿಮಿತ್ತ ಪ್ರಾರ್ಥನಾ ಸಭೆಯನ್ನು ಆಯೋಜಿಸಲಾಗಿದೆ. ಕಾರಣ, ಕೆ.ಎಚ್. ಪಾಟೀಲರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕಾರ್ಯಕ್ರಮದ ಸಂಘಟಕರು ಪ್ರಕಟಣೆಯ ಮೂಲಕ ವಿನಂತಿಸಿದ್ದಾರೆ.

## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಫೆಬ್ರವರಿ 8ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 16ರಲ್ಲಿ ಡಿಸಿ ಮಿಲ್ ರಸ್ತೆ, ಡೋರ್‌ಗಲ್ಲಿ ಉಳಿದ ಭಾಗಗಳು, ವಾರ್ಡ್ ನಂ. 22ರಲ್ಲಿ ಅಮರೇಶ್ವರ ನಗರ, ತಾಜನಗರ, ವಾರ್ಡ್ ನಂ. 29ರಲ್ಲಿ ರಾಜೀವ್ ಗಾಂದಿ ನಗರ, ಪೊಲೀಸ್ ಸ್ಟೇಷನ್ ಹಿಂದಿನ ಭಾಗ, ಸುಡುಗಾಡು ಸಿದ್ದರ ಕಾಲೋನಿಯ ಲೈನ್, ಬಂಡಿ ಅವರ ಲೈನ್, ಮಸೂತಿ ಲೈನ್, ಡಂಬಳ ಅವರ್ ಲೈನ್, ಚಂದಾವರಿ ಅವರ ಲೈನ್- ಮೇಲಿನ ಭಾಗ, ವಾರ್ಡ್ ನಂ 35, 34ರಲ್ಲಿ ಈ ಡಬ್ಲ್ಯೂ ಎಸ್, ಡಿಪೋ ಮೇಲಿನ ಭಾಗ, ಹನುಮಂತ ದೇವರ ಗುಡಿ, ಪಾಠಶಾಲೆ, ಬಸವೇಶ್ವರ ಶಾಲೆ, ವಾರ್ಡ್ ನಂ. 04 ರಲ್ಲಿ ಬಿ.ಎಸ್.ಎನ್.ಎಲ್.ಆಫೀಸ್, ಕಣವಿ ಪ್ಲಾಟ್, ಮಂಜುನಾಥ ನಗರ ಉಳಿದ ಕೆಲವು ಭಾಗಗಳು, ವಾರ್ಡ್ ನಂ. 27ರಲ್ಲಿ ಹಮಾಲರ ಪ್ಲಾಟ್, ವೀರನಾರಾಯಣ ಬಡಾವಣೆ, ಕೆಎಚ್ ಪಾಟೀಲ್ ಬಡಾವಣೆ, ವಾರ್ಡ್ ನಂ. 07ರಲ್ಲಿ ಪೆಂಡಾರ ಓಣಿ, ಮಲ್ಲೇಶಪ್ಪನ್ ಲೈನ್, ನಂದರಗಿಯವರ ಲೈನ್, ಗಚ್ಚಿಯವರ ಲೈನ್, ಅಬ್ಬಿಗೇರಿ ಲೈನ್, ಬಚಲಕ್ಕಮ್ಮನಗುಡಿ ಲೈನ್, ಪಿಂಡಕೂರ್ ಲೈನ್, ಚೆನ್ನೈಗೌಡ್ರ ಲೈನ್, ಉಚ್ಚನ್‌ಗೌಡ್ರು ಲೈನ್, ವಾರ್ಡ್ ನಂ. 31, 32 ರಲ್ಲಿ ದಾಸರ ಓಣಿ, ಭಜಂತ್ರಿ ಓಣಿ, ಸಿಕ್ಕಲಗಾರ ಓಣಿ, ರಂಗನವಾಡ, ಸುಣಗಾರ ಓಣಿ, ತ್ರಿಕೂಟೇಶ್ವರ ರಸ್ತೆ, ಜೋಡ ಮಾರುತಿ ಗುಡಿ ರಸ್ತೆ ಗುಜ್ಜರ ಬಸ್ತಿ ಲೈನ್, ಹಸಿರು ಕೆರೆ, ಹಾಳ ದಿಬ್ಬ ಲೈನ್, ಹಳೆ ಕಚೇರಿ ಹೊಂಡ ಉಳಿದ ಭಾಗಗಳು

**ವಿಶೇಷ ಸೂಚನೆ :** ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ನಿಯಮಗಳನ್ನು ಗಾಳಿಗೆ ತೂರಿ, ಸೂಕ್ತ ದಾಖಲೆಯಿಲ್ಲದೇ ಸಂಚರಿಸುತ್ತಿದ್ದ ಆಟೋ ಚಾಲಕರಿಗೆ ಬಿಸಿ


# ನಿಯಮ ಉಲ್ಲಂಘಿಸಿದ ಆಟೋಗಳ ಜಪ್ತಿ

■ ವಿಜಯಸಾಕ್ಷಿ ಸುದ್ದಿ, ಗದಗ



ಬಹುತೇಕ ನಗರಗಳಲ್ಲಿ ಸಾರ್ವಜನಿಕರದ್ದು ಒಂದೇ ದೂರು. 'ಎಲ್ಲರಿಗೂ ಇರುವ ಸಂಚಾರಿ ನಿಯಮಗಳು ಈ ಆಟೋ ಚಾಲಕರಿಗೆ ಇಲ್ಲವೇ? ಸಂಚಾರ ನಿಯಮ ಉಲ್ಲಂಘಿಸುವ ಆಟೋ ಚಾಲಕರಿಗೆ ಪೊಲೀಸ್ ಸಿಬ್ಬಂದಿಗಳ್ಯಾರೂ ಬಿಸಿ ಮುಟ್ಟಿಸುವುದಿಲ್ಲವೇ? ರಸ್ತೆ ತುಂಬ ಅಡ್ಡಾದಿಡ್ಡಿ ಆಟೋ ಓಡಿಸುತ್ತಾರೆ, ಏಕಮುಖ ಸಂಚಾರವಿರುವ ರಸ್ತೆಗಳಲ್ಲಿಯೂ ಬೇಕಾಬಿಟ್ಟಿ ಬರುತ್ತಾರೆ. ನಿಗದಿತ ಸಂಖ್ಯೆಗಿಂತ ಹೆಚ್ಚಿನ ಪ್ರಯಾಣಿಕರನ್ನೂ ತುಂಬಿ ಸಾಗುತ್ತಾರೆ...' ಇತ್ಯಾದಿ ದೂರುಗಳು ಕೇಳಿಬರುತ್ತಲೇ ಇರುತ್ತವೆ. ಆದರೆ, ಪೊಲೀಸ್ ಮತ್ತು ಸಂಚಾರ ಪೊಲೀಸ್ ಸಿಬ್ಬಂದಿಗಳು ಆಗಾಗ ಕಾರ್ಯಾಚರಣೆ ನಡೆಸಿ, ಇಂತಹ ಆಟೋ ಚಾಲಕರಿಗೆ ಬಿಸಿ ಮುಟ್ಟಿಸುತ್ತಿರುತ್ತಾರೆ.

ಗದಗ ನಗರದಲ್ಲಿಯೂ ಹೀಗೆ ಸಂಚಾರ ನಿಯಮ ಉಲ್ಲಂಘನೆ, ಲೈಸನ್ಸ್ ಹಾಗೂ ಇನ್ನಿತರ ಸೂಕ್ತ ದಾಖಲೆ ಇಲ್ಲದೇ ಸಂಚರಿಸುವ ಆಟೋಗಳ ಮೇಲೆ ಬುಧವಾರ ಪೊಲೀಸರು ದಾಳಿ ನಡೆಸಿದ್ದು, ಒಟ್ಟು 106 ಆಟೋಗಳನ್ನು ಜಪ್ತಿ ಮಾಡಿದ್ದಾರೆ.



ಗದಗ-ಬೆಟಗೇರಿ ಅವಳಿ ನಗರದ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಪರವಾನಗಿ ಇಲ್ಲದೆ ಸಂಚರಿಸುತ್ತಿದ್ದ ಆಟೋಗಳು, ನಿಗದಿತ ಸಂಖ್ಯೆಗಿಂತ ಹೆಚ್ಚಿನ ಪ್ರಮಾಣಿಕರನ್ನು ತುಂಬಿಕೊಂಡು ಹೋಗುವುದು, ಡ್ರೈವಿಂಗ್ ಲೈಸನ್ಸ್, ಗ್ರಾಮೀಣ ಭಾಗದ ಪರ್ಮಿಟ್ ಪಡೆದು ನಗರದ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಆಟೋಗಳ ತಪಾಸಣೆ ನಡೆಸಿದ ಪೊಲೀಸರು, ತಪ್ಪಿತಸ್ಥ ಆಟೋ ಚಾಲಕರ ಒಟ್ಟು 106 ಆಟೋಗಳನ್ನು ವಶಕ್ಕೆ ಪಡೆದಿದ್ದಾರೆ.

ವಶಕ್ಕೆ ಪಡೆದ ಈ ಎಲ್ಲ ಆಟೋಗಳನ್ನು ಇಲ್ಲಿನ ಸಂಚಾರ ಪೊಲೀಸ್ ಠಾಣೆ ಆವರಣದಲ್ಲಿ ಸರತಿಯಲ್ಲಿ ನಿಲ್ಲಿಸಿ, ಸೂಕ್ತ ದಾಖಲೆಗಳ ತಪಾಸಣೆ ನಡೆಸಿದ್ದಾರೆ. ಈ ವೇಳೆ ಕೆಲ ಆಟೋ ಚಾಲಕರು, ದಾಖಲೆಗಳು ಸರಿಯಿದ್ದರೂ ಪೊಲೀಸರು ವಿನಾಕಾರಣ ದಂಡ ವಿಧಿಸುತ್ತಿದ್ದಾರೆ ಎಂದು ಆರೋಪಿಸಿದರು.

ಅವಳಿ ನಗರದಲ್ಲಿ ಪೊಲೀಸರು ಈ ಪ್ರಮಾಣದ ಆಟೋಗಳನ್ನು ಜಪ್ತಿ ಮಾಡಿ ತಪಾಸಣೆ ನಡೆಸಿದ್ದು ಇದೇ ಮೊದಲು ಎನ್ನಬಹುದು. ಇಷ್ಟು ದಿನ ಕೇವಲ ಬೈಕ್ ಸವಾರರನ್ನೇ ಗುರಿಯಾಗಿಸಿಕೊಂಡು

> ಆಟೋ ಚಾಲಕರ ಡ್ರೈವಿಂಗ್ ಲೈಸನ್ಸ್ ಸೇರಿದಂತೆ ಇತರ ಎಲ್ಲ ದಾಖಲೆಗಳ ಪರಿಶೀಲನೆ ಮತ್ತು ಸಂಚಾರ ನಿಯಮ ಉಲ್ಲಂಘಿಸಿದ ಒಟ್ಟು 106 ಆಟೋಗಳನ್ನು ಈ ಕಾರ್ಯಾಚರಣೆಯಲ್ಲಿ ವಶಕ್ಕೆ ಪಡೆದು, ತಪಾಸಣೆ ನಡೆಸಿ, ತಪ್ಪಿತಸ್ಥ ಆಟೋ ಚಾಲಕರಿಗೆ ನಿಯಮಾನುಸಾರ ದಂಡ ವಿಧಿಸಲಾಗಿದೆ.
>
> **– ಬಿ.ಎಸ್. ನೇಮಗೌಡ.**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಗದಗ.

ಕಾರ್ಯಾಚರಣೆ ನಡೆಸುವ ಪೊಲೀಸರು ದಂಡ ವಿಧಿಸುತ್ತಾರೆ ಎನ್ನುವ ಆರೋಪವಿತ್ತು. ಆದರೆ ಆಟೋ ಚಾಲಕರ ವರ್ತನೆ, ಹಿಂಡು ಹಿಂಡಾಗಿ ಜನರನ್ನು ತುಂಬಿಕೊಂಡು ಹೋಗುವ ಬಗ್ಗೆ ವ್ಯಾಪಕ ಟೀಕೆ ವ್ಯಕ್ತವಾದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಕಣ್ಣೆದುರೇ ಕುರಿಗಳಂತೆ ಜನರನ್ನು ತುಂಬಿಕೊಂಡು ಹೋದರೂ ಮೌನವಾಗಿರುತ್ತಿದ್ದ ಪೊಲೀಸರು, ಬುಧವಾರ ಏಕಾಏಕಿ ತಪಾಸಣೆ ನಡೆಸಿ ಕ್ರಮ ಕೈಗೊಂಡಿರುವುದು ತುಸು ನೆಮ್ಮದಿ ಮೂಡಿಸಿದೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟರು.

ಡಿವೈಎಸ್‌ಪಿ ಜೆ.ಎಚ್. ಇನಾಮದಾರ ಹಾಗೂ ಸಂಚಾರಿ ಪೊಲೀಸರು ಆಟೋ ಜಪ್ತಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.



### ಬೆಳ್ಳಂಬೆಳಿಗ್ಗೆ ಬಾಳೆತೋಟದಲ್ಲಿ ಯುವಕನ ಮೇಲೆ ದಾಳಿ ನಡೆಸಿದ ಚಿರತೆ

# ಚಿರತೆ ಸೆರೆಗೆ ಕಾರ್ಯಾಚರಣೆ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ



ತಾಲೂಕಿನ ಜೀಗೇರಿ ಗ್ರಾಮದ ಬಾಳೆತೋಟದಲ್ಲಿ ಕೂಲಿ ಕೆಲಸಕ್ಕೆ ಹೋಗಿದ್ದ ಯುವಕನೋರ್ವನ ಮೇಲೆ ಚಿರತೆ ದಾಳಿ ನಡೆಸಿ, ಗಾಯಗೊಳಿಸಿದ ಘಟನೆ ಬುಧವಾರ ಮುಂಜಾನೆ ನಡೆದಿದೆ.

ಜೀಗೇರಿ ಗ್ರಾಮದ ಶರಣಪ್ಪ ಆವಾರಿ ಅವರ ಬಾಳೆತೋಟದಲ್ಲಿ ಉದಯ ಶರಣಪ್ಪ ನಿಡಶೇಸಿ (17) ಎಂಬ ಯುವಕ ಬಾಳೆಗೋಣಿ ಕಡಿಯುವ ವೇಳೆ ಚಿರತೆ ದಾಳಿ ಮಾಡಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾನೆ. ತೋಟದಲ್ಲಿ ಕೂಲಿ ಕಾರ್ಮಿಕರು ಜೋರಾಗಿ ಬಾಯಿ ಮಾಡಿದ್ದರಿಂದ ಚಿರತೆ ಸ್ಥಳದಿಂದ ಓಡಿ ಹೋಗಿದೆ. ಚಿರತೆ ದಾಳಿಗೆ ತುತ್ತಾಗಿದ್ದ ಯುವಕನನ್ನು ಪಟ್ಟಣದ ಸರ್ಕಾರಿ ಸಮುದಾಯ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಿದ ಬಳಿಕ ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ಕಳುಹಿಸಲಾಗಿದೆ.

> **ಒಂದೇ ದಿನ ಎರಡು ದಾಳಿ**
>
> ಜೀಗೇರಿ ಗ್ರಾಮದ ಉದಯ ನಿಡಶೇಸಿ ಮೇಲೆ ದಾಳಿ ನಡೆಸಿದ ಕೆಲವೇ ಸಮಯದ ಬಳಿಕ ಅದೇ ಗ್ರಾಮದ ಕುರಿಗಾಹಿ ಉಮೇಶ ದೇವಪ್ಪ ಜಿಗಳೂರ (28) ಎಂಬುವವರ ಮೇಲೆ ಚಿರತೆ ದಾಳಿ ನಡೆಸಿದ್ದು, ಉಮೇಶ ಅವರ ಕಾಲಿಗೆ ಕಚ್ಚಿ ಗಾಯಗೊಳಿಸಿದೆ. ಗಾಯಾಳುವಿಗೆ ಗಜೇಂದ್ರಗಡ ಸಮುದಾಯ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಜಿಲ್ಲಾಸ್ಪತ್ರೆಗೆ ಕಳುಹಿಸಲಾಗಿದೆ.

▶▶ 3ನೇ ಪುಟಕ್ಕೆ

### ಕಾಂಗ್ರೆಸ್ ಸರ್ಕಾರದ ವಿರುದ್ಧ ಫೆ. 12ರಂದು ಜೆಡಿಎಸ್‌ನಿಂದ ಪ್ರತಿಭಟನೆ

# ಗ್ಯಾರಂಟಿ ಕಾರ್ಯಕ್ರಮಗಳಿಂದ ಆರ್ಥಿಕ ಅವನತಿ

■ ವಿಜಯಸಾಕ್ಷಿ ಸುದ್ದಿ, ಗದಗ



ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಮುಖಂಡರು ದೆಹಲಿಯಲ್ಲಿ ನಡೆಸುತ್ತಿರುವ 'ನಮ್ಮ ತೆರಿಗೆ ನಮ್ಮ ಹಕ್ಕು' ಹೋರಾಟ ದೊಡ್ಡ ನಾಟಕವಾಗಿದೆ ಎಂದು ಜೆಡಿಎಸ್ ರಾಜ್ಯ ವಕ್ತಾರ ವೆಂಕನಗೌಡ ಗೋವಿಂದಗೌಡ್ರ ಆರೋಪಿಸಿದರು.

ಬುಧವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಗ್ಯಾರಂಟಿ ಕಾರ್ಯಕ್ರಮಗಳಿಂದ ಆರ್ಥಿಕ ಅಧಃಪತನದತ್ತ ಸಾಗಿರುವ ರಾಜ್ಯ ಕಾಂಗ್ರೆಸ್ ಸರಕಾರ, ಫೆಬ್ರವರಿಯಲ್ಲಿ ಮಂಡಿಸಲಿರುವ ರಾಜ್ಯ ಬಜೆಟ್‌ಗೆ ಅನುದಾನದ ಕೊರತೆಯಾಗಿದ್ದರಿಂದ ಕೇಂದ್ರ ಸರಕಾರದಿಂದ ಅನುದಾನ ಬಂದಿಲ್ಲ ಎನ್ನುವ ಹೊಸ ನಾಟಕ ಆರಂಭಿಸಿದೆ ಎಂದು ಟೀಕಿಸಿದರು. ಇದೇ ಫೆ.16ರಂದು ಸಿದ್ದರಾಮಯ್ಯ ರಾಜ್ಯ ಬಜೆಟ್ ಮಂಡಿಸಲಿದ್ದು, ಈ ಬಾರಿ ರೈತರ ಸಾಲ ಮನ್ನಾ ಮಾಡಬೇಕು, ಕೃಷಿ ಯಂತ್ರೋಪಕರಣಗಳ ಸಾಲದ ಅವಧಿಯನ್ನು ವಿಸ್ತರಿಸಬೇಕು ಎಂದು ಒತ್ತಾಯಿಸಿ ಜೆಡಿಎಸ್ ರಾಜ್ಯ ಕಾರ್ಯಾಧ್ಯಕ್ಷ ಅಲ್ಕೋಡ ಹನುಮಂತಪ್ಪ ನೇತೃತ್ವದಲ್ಲಿ ಫೆ.12ರಂದು ಗದುಗಿನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ 10 ಗಂಟೆಗೆ ನಗರಸಭೆ ಆವರಣದಲ್ಲಿರುವ ಅಂಬೇಡ್ಕರ್ ಮೂರ್ತಿಗೆ ಮಾಲಾರ್ಪಣೆ ಮಾಡಿ, ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಮೆರವಣಿಗೆ ನಡೆಸಿ ಮನವಿ ಸಲ್ಲಿಸಲಾಗುವುದು. ಪ್ರತಿಭಟನೆಯಲ್ಲಿ ರೈತರು ಟ್ರ್ಯಾಕ್ಟರ್, ಎತ್ತು- ಚಕ್ಕಡಿ ಸಹಿತ ಭಾಗವಹಿಸಲಿದ್ದಾರೆ. ಹೋರಾಟಕ್ಕೆ ಕೈ ಜೋಡಿಸುವಂತೆ ರೈತ ಹಾಗೂ ಕನ್ನಡಪರ ಸಂಘಟನೆಗಳನ್ನು ಆಹ್ವಾನಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

> ನಾನು ಕಟ್ಟಿದ ತೆರಿಗೆ ನನಗೆ ಮಾತ್ರ ಬಳಕೆಯಾಗಬೇಕು ಎನ್ನುವ ಮನಸ್ಥಿತಿ ಕಾಂಗ್ರೆಸ್ ಪಕ್ಷದ್ದಾಗಿದೆ. ದೇಶದಲ್ಲಿ ನಿರಂತರವಾಗಿ 60 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಯಾವ ಯಾವ ರಾಜ್ಯಗಳಿಗೆ ಎಷ್ಟೆಷ್ಟು ಅನುದಾನ ಹಂಚಿಕೆ ಮಾಡಿದೆ ಎಂಬುದನ್ನು ಬಹಿರಂಗಪಡಿಸಲಿ ಎಂದು ವೆಂಕನಗೌಡ ಗೋವಿಂದಗೌಡ್ರ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಎಸ್‌ಸಿ-ಎಸ್‌ಟಿ ರಾಜ್ಯ ಘಟಕದ ಕಾರ್ಯದರ್ಶಿ ಪರಶುರಾಮ ಹಿರೇಮನಿ, ಜಿಲ್ಲಾಧ್ಯಕ್ಷ ಎಂ.ವೈ. ಮುಧೋಳ, ಕಾರ್ಯದರ್ಶಿ ಸುಭಾಸಚಂದ್ರ ದಾನರಡ್ಡಿ, ಜಿ.ಎ. ಬುರಡಿ, ದೇವಪ್ಪ ಮಲ್ಲಸಮುದ್ರ, ಪ್ರಫುಲ್ ಪುಣೇಕರ ಮುಂತಾದವರು ಉಪಸ್ಥಿತರಿದ್ದರು.

### ಕೃತಿ ಲೋಕಾರ್ಪಣೆಗೊಳಿಸಿದ ಸಚಿವ ಎಚ್.ಕೆ. ಪಾಟೀಲ ಅಭಿಮತ

# ಓದಿನಿಂದ ವ್ಯಕ್ತಿತ್ವ ವಿಕಸನ

■ ವಿಜಯಸಾಕ್ಷಿ ಸುದ್ದಿ, ಗದಗ



ಜನತೆಯ ಜ್ಞಾನವನ್ನು ವಿಸ್ತರಿಸುವಲ್ಲಿ ಪುಸ್ತಕಗಳ ಪಾತ್ರ ಬಹು ಮುಖ್ಯವಾಗಿದೆ. ನಿರಂತರ ಪುಸ್ತಕಗಳನ್ನು ಓದುವದರಿಂದ ಮನಃಶಾಂತಿ ಹಾಗೂ ವ್ಯಕ್ತಿತ್ವ ವಿಕಾಸವಾಗುತ್ತದೆ ಎಂದು ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಹೇಳಿದರು.

ಅವರು ಕೆ.ಎಚ್. ಪಾಟೀಲ ಸ.ಪ್ರ.ದ ಕಾಲೇಜು ಹುಲಕೋಟಿಯಲ್ಲಿ ನಡೆದ ಕರ್ನಾಟಕ ನಾಮಕರಣ ಸಂಭ್ರಮದಲ್ಲಿ ಪಾಲ್ಗೊಂಡು, ಕಾಲೇಜಿನ ಸಮಾಜಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಪ್ರಶಾಂತ ಹುಲಕುಂದ ರಚಿಸಿದ ಸಮಾಜಶಾಸ್ತ್ರ ಕೃತಿಗಳ ಲೋಕಾರ್ಪಣೆ ಮಾಡಿ ಮಾತನಾಡಿದರು.

ಪ್ರಾಧ್ಯಾಪಕರು ಪ್ರಸ್ತುತ ದಿನಮಾನದಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಒತ್ತು ನೀಡಬೇಕು. ಕರ್ನಾಟಕ ನಾಮಕರಣ ಸಂಭ್ರಮವು ಕನ್ನಡಿಗರ ಅಸ್ಮಿತೆಯ ಸಂಕೇತವಾಗಿದೆ. ಕರ್ನಾಟಕ ನಾಮಕರಣವಾಗಲು ಗದುಗಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿರ್ಣಯವೇ ಪ್ರೇರಣೆಯಾಗಿದೆ. ಇದು ಐತಿಹಾಸಿಕ ಸಂಗತಿಯಾಗಿದ್ದು, ಇಂತಹ ಬಹುಮುಖ್ಯ ಸಂಗತಿಗಳನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕೆಂದು ಕರೆ ನೀಡಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಆಕಸ್ಮಿಕವಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಈ ಭಾಗದಲ್ಲಿ ಹುಲಕೋಟಿ ಸ.ಪ್ರ.ದ ಕಾಲೇಜು ಮಾದರಿಯಾಗಿದ್ದು, ಗ್ರಾಮೀಣ ಭಾಗದ ಮಕ್ಕಳ ಉನ್ನತ ಶಿಕ್ಷಣಕ್ಕೆ ಆಶಾಕಿರಣವಾಗಿದೆ ಎಂದು ಅಭಿಪ್ರಾಯಪಟ್ಟರು.

ಪ್ರಾಚಾರ್ಯ ಡಾ.ಶಿವಪ್ಪ ಕುರಿ ಮಾತನಾಡಿದರು. ಕನ್ನಡ ಪ್ರಾಧ್ಯಾಪಕಿ ಡಾ.ಸುಧಾ ಕೌಜಗೇರಿ, ಲೇಖಕ ಪ್ರಶಾಂತ ಹುಲಕುಂದ, ಸಾಹಿತಿ ಪ್ರೊ. ಅನ್ನದಾನಿ ಹಿರೇಮಠ, ಪ್ರೊ. ಕೆ.ಎಚ್. ಬೇಲೂರ, ಡಾ. ಜಿ.ಬಿ. ಪಾಟೀಲ, ಡಾ. ರಾಜೇಂದ್ರ ಗಡಾದ, ಡಾ. ಅಪ್ಪಣ್ಣ ಹಂಜೆ, ಡಾ.ಲಕ್ಷ್ಮಣ ಮುಳಗುಂದ, ರಮೇಶ ಹುಲಕುಂದ, ಡಾ. ಜಿತೇಂದ್ರ ಜಹಾಗೀರದಾರ, ಮಹಾಂತೇಶ ಗೊರವನಕೊಳ್ಳ ಸೇರಿದಂತೆ ಅಧ್ಯಾಪಕ ವೃಂದದವರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕಿರಣಕುಮಾರ ರಾಯರ ಕಾರ್ಯಕ್ರಮ ನಿರೂಪಿಸಿದರು. ಚಂದ್ರಪ್ಪ ಎಚ್. ಸ್ವಾಗತಿಸಿದರು. ನವೀನ ತಿರ್ಲಾಪೂರ ವಂದಿಸಿದರು.

## ಹಾಲಿನ ಪ್ರೋತ್ಸಾಹ ಧನ ಪಾವತಿಗೆ ಬಿಜೆಪಿ ಆಗ್ರಹ



■ ವಿಜಯಸಾಕ್ಷಿ ಸುದ್ದಿ, ಗದಗ

ರೈತರಿಗೆ ಬರುವ ಹಾಲಿನ ಪ್ರೋತ್ಸಾಹ ಧನವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಸ್ಥಗಿತಗೊಳಿಸಿದೆ. ರಾಜ್ಯದಲ್ಲಿ ಒಟ್ಟು 80 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, 25 ಲಕ್ಷ ರೈತರಿಗೆ 718 ಕೋಟಿ ರೂ.ಗಳಷ್ಟು ಪ್ರೋತ್ಸಾಹ ಧನವನ್ನು ರಾಜ್ಯ ಸರ್ಕಾರ ಕೂಡಲೇ ಪಾವತಿಸಬೇಕು ಎಂದು ಗದಗ ಜಿಲ್ಲಾ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಸಿ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಗದಗ ಜಿಲ್ಲಾಧ್ಯಕ್ಷ ತೋಟಪ್ಪ(ರಾಜು) ಕುರುಡಗಿ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ರಾಜಣ್ಣ ಕುಲಕರ್ಣಿ, ಜಿಲ್ಲಾ ಪ್ರ. ಕಾರ್ಯದರ್ಶಿ ಪಕ್ಕೀರೇಶ ರಟ್ಟಿಹಳ್ಳಿ, ಲಿಂಗರಾಜ ಪಾಟೀಲ, ಆರ್.ಕೆ. ಚವ್ಹಾಣ, ಮುಖಂಡರಾದ ಎಂ.ಎಸ್. ಕರಿಗೌಡ್ರ, ರವಿ ದಂಡಿನ, ಜಗನ್ನಾಥಸಾ ಭಾಂಡಗೆ, ಪ್ರೇಮನಾಥ ಬಣ್ಣದ, ಅಶೋಕ ಸಂಕಣ್ಣವರ, ನಗರಸಭಾಧ್ಯಕ್ಷೆ ಉಷಾ ದಾಸರ, ಅನಿಲ ಅಬ್ಬಿಗೇರಿ, ರಾಘವೇಂದ್ರ ಯಳವತ್ತಿ, ನಾಗರಾಜ ತಳವಾರ, ಶಂಕರ ಕಾಕಿ, ರಮೇಶ ಸಜ್ಜಗಾರ, ಶಂಕರ ಕರಿಬಿಷ್ಠಿ, ಕೆ.ಪಿ. ಕೋಟಿಗೌಡ್ರ, ಶಾರದಾ ಸಜ್ಜನರ, ಕಮಲಾಕ್ಷೀ ಗೊಂದಿ, ಸ್ವಾತಿ ಅಕ್ಕಿ, ಅಪ್ಪಣ್ಣ ಟೆಂಗಿನಕಾಯಿ, ಅಮರನಾಥ ಬೆಟಗೇರಿ, ಅಮರನಾಥ ಗಡಗಿ, ನಿರ್ಮಲಾ ಕೊಳ್ಳಿ, ಸಿದ್ದಪ್ಪ ಜೊಂಡಿ, ಸಿದ್ದಪ್ಪ ಬಾಗಾಪೂರ, ಶಶಿಧರ ದಿಂಡೂರ, ಬೂದಪ್ಪ ಹಳ್ಳಿ, ಬಸವರಾಜ ಪೂಜಾರ, ವೆಂಕಟೇಶ ಹಬೀಬ, ಮಲ್ಲಪ್ಪ ಕರಿಬಿಷ್ಠಿ, ಮಂಜುನಾಥ ಶಾಂತಗೇರಿ, ಅಶೋಕ ಕರೂರ, ಸುಜೇಂದ್ರ ಗಲಗಲಿ, ವಾಯ್.ಪಿ. ಅಡ್ನೂರ, ಮಂಜುನಾಥ ಸ್ವಾಮಿ, ಸಿದ್ದಪ್ಪ ಈರಗಾರ, ಮಂಜು ಲಕ್ಕುಂಡಿ, ನಾಗರಾಜ ಮುರುಡಗಿ, ದೇವಪ್ಪ ಇಟಗಿ, ಅಕ್ಕಮ್ಮ ವಸ್ತ್ರದ, ಪಾರ್ವತಿ ಪಟ್ಟಣಶೆಟ್ಟಿ, ಯೋಗೇಶ್ವರಿ, ವೆಂಕಟೇಶ ಕೋಣಿ ಮುಂತಾದವರಿದ್ದರು.

## ಸಂಪಾದಕೀಯ

### ಜನರ ದಿಕ್ಕು ತಪ್ಪಿಸಿದ ಕೇಂದ್ರ ಮತ್ತು ರಾಜ್ಯ ಸರಕಾರಗಳು

ಕೇಂದ್ರ ಸರ್ಕಾರ ರಾಜ್ಯದ ಜಿಎಸ್‌ಟಿ ಪಾಲಿನ ಹಣವನ್ನ ಕೊಡುವುದರಲ್ಲಿ ತಾರತಮ್ಯ ಮಾಡುತ್ತಿದೆ ಎಂದು ಆರೋಪಿಸಿ ಇಡೀ ಕಾಂಗ್ರೆಸ್ ಸರಕಾರ ದೆಹಲಿಯಲ್ಲಿ ಪ್ರತಿಭಟನೆ ನಡೆಸಿತು.

ರಾಜ್ಯ ಸರ್ಕಾರವೊಂದು ಕೇಂದ್ರ ಸರ್ಕಾರದ ವಿರುದ್ಧ ಈ ರೀತಿ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದು ದೇಶದ ಇತಿಹಾಸದಲ್ಲಿ ಇದೇ ಮೊದಲು ಎನ್ನಬಹುದು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪ್ರತಿಭಟನೆಯ ನಡೆದಿದ್ದು ಒಂದು ವಿಶೇಷವೇ.

ಕಾಂಗ್ರೆಸ್ ಸರ್ಕಾರ ನಡೆಸಿದ ಪ್ರತಿಭಟನೆಯಿಂದ ಪ್ರತಿಫಲ ದೊರೆಯದಿದ್ದರೂ ಪ್ರತಿಕ್ರಿಯೆ ಮಾತ್ರ ವ್ಯಕ್ತವಾಗಿದೆ. ಕೇಂದ್ರ ವಿತ್ತ ಖಾತೆ ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಕಾಂಗ್ರೆಸ್ ಸರ್ಕಾರದ ಆರೋಪಗಳಿಗೆ ಸ್ಪಷ್ಟನೆ ನೀಡಿದ್ದಾರೆ.

ಕೇಂದ್ರ ಸಚಿವರು ಇಷ್ಟು ಬೇಗ ಸ್ಪಷ್ಟನೆ ನೀಡಿರುವುದು ನೋಡಿದರೆ ಪ್ರತಿಭಟನೆಯ ಬಿಸಿ ತಾಗಿರುವುದಂತೂ ನಿಜ. ಕರ್ನಾಟಕದ ಜಿಎಸ್‌ಟಿ ಪಾಲಿನ ಹಣ ಹಂಚಿಕೆಯಲ್ಲಿ ನಯಾ ಪೈಸಾ ಬಾಕಿ ಉಳಿದಿಲ್ಲ ಎನ್ನುವ ಅಂಕಿ ಅಂಶಗಳ ಸಹಿತ, ನಿರ್ಮಲಾ ಸೀತಾರಾಮನ್ ವಿವರಣೆ ನೀಡಿದ್ದಾರೆ.

ನಿರ್ಮಲಾ ಸೀತಾರಾಮನ್ ವಿವರಣೆಯಲ್ಲಿ ಒಂದು ಅಂಶವನ್ನು ಸ್ಪಷ್ಟಪಡಿಸಿದ್ದಾರೆ. ಆಯೋಗದಿಂದ ಆಯೋಗಕ್ಕೆ ಅನುದಾನ ಹಂಚಿಕೆ ವ್ಯತ್ಯಾಸವಾಗುತ್ತದೆ. 14ನೇ ಹಣಕಾಸಿನ ಆಯೋಗ ಮತ್ತು 15ನೇ ಹಣಕಾಸಿನ ಆಯೋಗ ಅದನ್ನು ನಿರ್ಧಾರ ಮಾಡುತ್ತದೆ ಎಂದಿದ್ದಾರೆ.

ಹಾಗಿದ್ದರೆ ಆಯೋಗ ಆ ರೀತಿಯ ವ್ಯತ್ಯಾಸವಾಗುವಂತಹ ನೀತಿ ನಿರೂಪಣೆಗಳನ್ನು ಹೇಗೆ ಮತ್ತು ಏಕೆ ಮಾಡುತ್ತದೆ ಎನ್ನುವುದು ಯಾರಿಗೂ ತಿಳಿಯುತ್ತಿಲ್ಲ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರವನ್ನ ಟೀಕೆ ಮಾಡುತ್ತಿದೆ. ಕೇಂದ್ರ ಸರ್ಕಾರ ಹಣಕಾಸು ಆಯೋಗದತ್ತ ಬೊಟ್ಟು ಮಾಡಿ ತೋರಿಸುತ್ತಿದೆ.

ಇದ್ದ ಮೂವರಲ್ಲಿ ಕದ್ದವರು ಯಾರು ಎನ್ನುವುದು ಈ ಸಮಸ್ಯೆಗೆ ಹೋಲಿಕೆ ಮಾಡುವಂಥ ಪರಿಸ್ಥಿತಿ ಬಂದಿದೆ. ರಾಜ್ಯದ ಯಾವುದೇ ವಿಷಯವಿರಲಿ, ರಾಜಕಾರಣಿಗಳು ಬಹಿರಂಗ ಚರ್ಚೆಗೆ ಪಂಥಾಹ್ವಾನ ನೀಡುವುದು ಸಹಜ. ಆದರೆ ಬಹಿರಂಗ ಚರ್ಚೆಗೆ ಒಪ್ಪಿಕೊಳ್ಳುವುದಿಲ್ಲ ಎನ್ನುವುದು ಬೇರೆ ಮಾತು. ಆದರೆ ಈ ಜಿಎಸ್‌ಟಿ ಅನುದಾನ ಹಂಚಿಕೆಯ ವಿಷಯವಾಗಿ ಯಾರೊಬ್ಬರೂ ಚರ್ಚೆಗೆ ಬನ್ನಿ ಎಂದು ಕರೆಯುತ್ತಿಲ್ಲ.

ಇದೆಲ್ಲವನ್ನ ನೋಡಿದರೆ, ಜಿಎಸ್‌ಟಿ ಹಣ ಹಂಚಿಕೆ ವಿಷಯ ಕೇವಲ ರಾಜಕೀಯ ಲಾಭಕ್ಕಾಗಿ ನಡೆಯುತ್ತಿದೆ ಎನ್ನುವ ಅನುಮಾನಗಳು ಮೂಡುತ್ತವೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಈ ಅನುದಾನ ಹಂಚಿಕೆ ಹೇಗೆ ಆಗುತ್ತದೆ ಎನ್ನುವ ಕುರಿತು ಜನಸಾಮಾನ್ಯರಿಗೆ ಸ್ಪಷ್ಟ ತಿಳುವಳಿಕೆ ನೀಡಬೇಕಿದೆ. ಆಗ ತಪ್ಪು-ಒಪ್ಪು ನಿರ್ಧಾರವಾಗುತ್ತದೆ. ಇಲ್ಲದಿದ್ದರೆ ಇದೊಂದು ತಾಲೀಮು ಇಲ್ಲದ ನಾಟಕ ಮಾಡಿದಂತಾಗುತ್ತದೆ.


## ಕರ್ನಾಟಕ ಸರ್ಕಾರದಿಂದ 'ಮನೆಮನೆಗೂ ಸಂವಿಧಾನ' ಆಂದೋಲನ

# ಭಾರತ ಸಂವಿಧಾನವೆಂಬ ಬೆಳಕಿನ ದಾರಿ

ತನ್ನ ಸಮತೆಯ ಆಶಯದಿಂದ ಜಗತ್ತಿನ ಹೃದಯ ಗೆದ್ದ ಭಾರತ ಸಂವಿಧಾನಕ್ಕೆ ಈಗ 75 ವರ್ಷ. ಶೋಷಿತರ ಮೇಲಿನ ಸಾವಿರಾರು ವರ್ಷಗಳ ಅನ್ಯಾಯವನ್ನು ಕೊನೆಗಾಣಿಸುವ ತಮ್ಮ ಕನಸಿಗೆ ಸಂವಿಧಾನದ ಮೂಲಕ ರೆಕ್ಕೆ ಕಟ್ಟಿದವರು ಬಾಬಾಸಾಹೇಬ್ ಅಂಬೇಡ್ಕರ್. ಅದಕ್ಕಾಗಿ ಅವರು ಸವೆಸಿದ ದಾರಿ ಸುಲಭದ್ದಾಗಿರಲಿಲ್ಲ. ಪ್ರಪಂಚದ ಮೂಲೆಮೂಲೆಯ ಸಮತೆಯ ಆಶಯಗಳನ್ನು ಹುಡುಕಿ, ಭಾರತ ನೆಲದ ಶೋಷಣೆಯ ಗಾಯಗಳನ್ನು ಮಾಯಿಸುವ ಮುಲಾಮು ಕಂಡು ಹಿಡಿದರು.

ಈ ದಾರಿಯಲ್ಲಿ ಅವರು ಇಡೀ ದೇಶವನ್ನೂ, ದೇಶದ ಜನರ ಕಷ್ಟ-ಸುಖಗಳನ್ನು ಅಧ್ಯಯನ ಮಾಡಿದರು. ಜಾತಿ ತಾರತಮ್ಯದ ಮೂಲ ಬೇರುಗಳನ್ನು ಶೋಧಿಸಿದರು. ಯಾವ ಔಷಧಿ ಈ ತಾರತಮ್ಯದ ರೋಗವನ್ನು ವಾಸಿ ಮಾಡಬಹುದು ಎಂದು ಮನಗಂಡರು. ಇದೆಲ್ಲದರ ಪ್ರತಿಫಲವಾಗಿ ಭಾರತ ಸಂವಿಧಾನ ಸಿದ್ಧಗೊಂಡಿತು.

ಸಂವಿಧಾನ ಜಾರಿ ಮಾಡುವವರು ಸಮರ್ಥರಾಗಿರಬೇಕು ಎಂದು ಬಾಬಾಸಾಹೇಬರು ಕೊನೆಯಲ್ಲಿ ಹೇಳಿಹೋದರು. ಅವರು ಹೇಳಿದ್ದು ನಿಜವಾಯಿತು. ಕೊನೆಗೂ ಸಂವಿಧಾನ ದೇಶದ ಜನರ ಬದುಕಿನ ಭಾಗವಾಗದೆ, ಆಡಳಿತ ಮಾಡುವವರ ಕಾರ್ಯಕ್ರಮವಾಯಿತು. ಈ ಕಾರಣದಿಂದ ಸಮಾಜಮುಖಿ ಆಲೋಚನೆಯ ಸರ್ಕಾರಗಳು ತಮ್ಮ ಆಶಯದ ಈಡೇರಿಕೆಗೆ ಸಂವಿಧಾನವನ್ನು ಮುನ್ನಲೆಗೆ ತರುತ್ತವೆ. ಇದೀಗ ಕರ್ನಾಟಕ ಸರ್ಕಾರ ಸಂವಿಧಾನಕ್ಕೆ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ 'ಮನೆಮನೆಗೂ ಸಂವಿಧಾನ'ವೆಂಬ ಆಂದೋಲನವನ್ನೇ ಕೈಗೊಂಡಿದೆ.




ಇದು ಭಾರತದ ಮಟ್ಟಿಗೆ ನಿಜಕ್ಕೂ ಮಹತ್ವದ ವಿದ್ಯಮಾನ. ಕೋಮುವಾದ, ಜಾತಿವಾದಗಳು ಹೊಸರೂಪ ಪಡೆಯುತ್ತಿರುವ, ಆ ಮೂಲಕ ಶೋಷಿತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿರುವ ಕಾಲಘಟ್ಟದಲ್ಲಿ ಸರ್ಕಾರಿ ಇಲಾಖೆಯೊಂದು ಸಂವಿಧಾನವನ್ನು ಹೊತ್ತು ಸಾಗುತ್ತಿರುವುದು ಮಹತ್ತರವಾದುದು. ಇದರಿಂದಾಗಿ ದಶಕಗಳಿಂದ ಸಂವಿಧಾನದ ನೆರಳಿನಲ್ಲಿ ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಬಂದಿರುವ ಸಂಘಟನೆಗಳಿಗೆ ಮತ್ತು ಸಂವಿಧಾನವನ್ನು ಹೊಸ ಪರಿಭಾಷೆಯಲ್ಲಿ ಅರ್ಥಮಾಡಿಕೊಳ್ಳಲು ಕಾಯುತ್ತಿದ್ದ ಯುವಜನತೆಗೆ ಹೊಸದೊಂದು ಬೆಳಕಿನ ದಾರಿ ಸಿಕ್ಕಂತಾಗಿದೆ.

ಕಳೆದ ಏಳೂವರೆ ದಶಕದಿಂದ ಭಾರತದಲ್ಲಾದ ಸಾಮಾಜಿಕ ಬದಲಾವಣೆಗಳ ಹಿಂದೆ ಭಾರತ ಸಂವಿಧಾನದ ಪಾಲಿದೆ. ಸಂವಿಧಾನ ಅಂಗೀಕಾರಗೊಂಡ 25 ವರ್ಷಗಳ ನಂತರ ಕರ್ನಾಟಕದಲ್ಲಿ ರೈತ ಸಂಘ ಮತ್ತು ದಲಿತ ಸಂಘರ್ಷ ಸಮಿತಿಗಳು ಜನ್ಮ ತಾಳಿದವು. ಈ ಎರಡೂ ಚಳವಳಿಗಳ ಜೊತೆಜೊತೆಗೆ ಕಾರ್ಮಿಕ ಹೋರಾಟಗಳು, ಮಹಿಳಾ ಹೋರಾಟಗಳೂ, ವಿದ್ಯಾರ್ಥಿ ಹೋರಾಟಗಳೂ ನಡೆದು ಕರ್ನಾಟಕ ಮಣ್ಣಿನ ಪ್ರತಿಭಟನಾತ್ಮಕ ವಿವೇಕವನ್ನು ಕಾಪಿಟ್ಟುಕೊಂಡವು.

ಈ ಎಲ್ಲಾ ಚಳವಳಿಗಳೂ ಆತ್ಯಂತಿಕವಾಗಿ ಅವಲಂಬಿಸಿದ್ದು ನಮ್ಮ ಸಂವಿಧಾನವನ್ನೇ. ಆಳುವ ಪಕ್ಷಗಳು ಸಂವಿಧಾನದ ಆಶಯಗಳ ವಿರುದ್ಧ ನಡೆದುಕೊಂಡಾಗ ಎಚ್ಚರಿಸುವ, ಜನರಿಗೆ ಅರಿವು ಮೂಡಿಸುವ ಕೆಲಸಗಳನ್ನು ಈ ಚಳವಳಿಗಳು ಮಾಡುತ್ತಾ ಬಂದಿವೆ. ಈ ಕಾರಣದಿಂದಾಗಿ ಆಳುವವರು ಕೋಮುವಾದಿಗಳು, ಜಾತಿವಾದಿಗಳಾಗಿದ್ದರೂ ಸಾಂವಿಧಾನಿಕ ನಡವಳಿಕೆಗಳನ್ನು ಅನಿವಾರ್ಯವಾಗಿ ರೂಢಿಸಿಕೊಳ್ಳಬೇಕಾಯಿತು.

ಕಾಲ ಸರಿದಂತೆ ತಾರತಮ್ಯಗಳಾಚೆಗಿನ ಸಮತೆಯ ಸಮಾಜವೊಂದು ರೂಪುಗೊಳ್ಳಬಹುದು ಎಂಬ ಹಿರಿಯರ ಕನಸು ಈಗ ವಿಫಲವಾಗಿದೆ. ಜಾತಿಧರ್ಮಗಳ ಹೆಸರಿನಲ್ಲೇ ಅಸಾಂವಿಧಾನಿಕ ಕೃತ್ಯಗಳು ನಡೆಯುತ್ತಿವೆ. ದಲಿತ-ಮಹಿಳೆಯರ-ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳು ಹಿಂದೆಂದಿಗಿಂತಲೂ ಹೆಚ್ಚಾಗುತ್ತಿವೆ. ವ್ಯವಸ್ಥಿತವಾಗಿ ಸಂವಿಧಾನವನ್ನು ಜನರ ನಂಬಿಕೆಯಾಚೆಗೆ ತಳ್ಳುವ, ಅದರ ಮೂಲ ಆಶಯಗಳಾದ ಧರ್ಮನಿರಪೇಕ್ಷತೆ ಮತ್ತು ಬಂಧುತ್ವವನ್ನು 'ಧರ್ಮವಿರೋಧ' ಎಂಬಂತೆ ಬಿಂಬಿಸುವ ಸಮಾಜವಿರೋಧಿಗಳ ಕೆಲಸ ಸ್ವಲ್ಪಮಟ್ಟಿಗೆ ಸಫಲವಾಗುತ್ತಿದೆ.

> ಸಹ ಜೀವಿಗಳನ್ನು ತಮ್ಮಂತೆ ಕಾಣುವ, ಎಂತಹಾ ಸಂದರ್ಭದಲ್ಲೂ ವ್ಯಕ್ತಿ ಘನತೆಯನ್ನು ಕಾಪಾಡಿಕೊಳ್ಳುವ, ಇನ್ನೊಬ್ಬರ ಬದುಕುಗಳನ್ನು ಮುರುಟಿಹೋಗದಂತೆ ತಡೆಯುವ ಕ್ರಿಯಾತ್ಮಕ ಪಾಠಗಳಿವೆ ಮತ್ತು ಎದೆಯಾಳದ ಆಶಯಗಳೇ ನಮ್ಮನ್ನು ಕೈಹಿಡಿದು ನಡೆಸುವ ಬದುಕಿನ ಕ್ರಮವಿದೆ. ಈ ಕಾರಣಕ್ಕಾದರೂ ನಮ್ಮ ಸಂವಿಧಾನ ನಮ್ಮೆಲ್ಲರ ಬದುಕಿನ ಮೂಲ ಬಿತ್ತಿಯಾಗಬೇಕಿದೆ.

ಈ ಕಾರಣಕ್ಕಾಗಿ ನಾವು ಬದುಕುತ್ತಿರುವ ಕಾಲ ಮತ್ತು ದೇಶದ ಧರ್ಮ ಸಂವಿಧಾನವಾಗಬೇಕಾಗಿದೆ. ಕೊಲ್ಲುವ ಬಾಷೆಗೆ ಉತ್ತರವಾಗಿ, ಹೊಸ ಹತಾರಗಳೊಂದಿಗೆ ನಮ್ಮೆದುರು ನಿಂತಿರುವ ಸಾಮ್ರಾಜ್ಯಶಾಹಿ, ಬಂಡವಾಳ ಶಾಹಿಶಕ್ತಿಗಳ ವಿರುದ್ಧದ ಒಡಲಹಾಡಾಗಿ ನಮ್ಮ ಸಂವಿಧಾನ ಹೊಮ್ಮಬೇಕಿದೆ. ಭೂಮಿ- ವಸತಿ- ಉದ್ಯೋಗ ವಂಚಿತರ, ಜಾತಿಯ ಕಾರಣಕ್ಕೆ ದೌರ್ಜನ್ಯಕ್ಕೆ ತುತ್ತಾದವರ, ಜಗತ್ತಿನ ಅರ್ಧದಷ್ಟು ಜನಸಂಖ್ಯೆಯಿದ್ದರೂ ದ್ವಿತೀಯ ದರ್ಜೆಯ ಬದುಕನ್ನು ನಡೆಸುತ್ತಿರುವ ಮಹಿಳೆಯರ ಕಣ್ಣ ದಾರಿಯಾಗಿ ನಮ್ಮ ಸಂವಿಧಾನ ರೂಪು ತಳೆಯಬೇಕಾಗಿದೆ. ಆ ಮೂಲಕ ಭಾರತಕ್ಕೆ ಅಂಟಿರುವ ಅಸಮಾನತೆಯ ಕಳಂಕವನ್ನು ತೊಳೆಯಬೇಕಿದೆ.

ಮನೆಮನೆಗೂ ಸಂವಿಧಾನ ಎಂದರೆ, ಕೇವಲ ಸಂವಿಧಾನದ ಆಶಯಗಳ ಅಕ್ಷರ ರೂಪವಲ್ಲದೆ ಗತಿಯಿಲ್ಲದವರ ಊರುಗೋಲಾಗಬೇಕಿದೆ. ಕರ್ನಾಟಕ ಸರ್ಕಾರ ಸಮಾಜಮುಖಿ ಕಾರ್ಯಕ್ರಮಗಳೊಟ್ಟಿಗೆ ಸಂವಿಧಾನವನ್ನು ಮನೆಮನೆಗಳಿಗೆ ತಲುಪಿಸುತ್ತಿರುವುದು ಮಹತ್ತರವಾರ ಸಂಗತಿ. ಯಾಕೆಂದರೆ ಆಶಯಗಳನ್ನು ಅಕ್ಷರರೂಪದಲ್ಲಿ ಮಾತ್ರವೇ ಹೊಂದಿರುವ ಬೃಹತ್ ಜನ ಸಮುದಾಯ ನಮ್ಮದು. ಆಡಿದ ಮಾತುಗಳು ಗಂಟಲಿನಿಂದ ಹೊರಟು ಗಾಳಿಯಲ್ಲಿ ಲಯವಾಗಿ ಬಿಡುವ ಮತ್ತು ಅಸಮಾನತೆಯನ್ನು ಇದ್ದ ಹಾಗೆ ಉಳಿಸಿಕೊಳ್ಳುವ ಪ್ರಕ್ರಿಯೆಗಳು ಇಲ್ಲಿಯವರೆಗೆ ನಮ್ಮನ್ನು ದಿಕ್ಕೆಡಿಸಿವೆ. ಈಗ ಮಾತುಗಳು ದೀಪದ ರೂಪ ತಾಳುವ ಹೊತ್ತು. ಆ ಬೆಳಕಿನಲ್ಲಿ ನಾವು ನಮ್ಮ ಸಂವಿಧಾನವನ್ನೂ, ಆ ಮೂಲಕ ಸಮಾನತೆಯನ್ನೂ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮಹದವಕಾಶ ನಮ್ಮ ಮನೆಬಾಗಿಲಲ್ಲಿದೆ.

– ಡಾ. ಹುಲಿಕುಂಟೆ ಮೂರ್ತಿ.

## ಡಾಕ್ಟರ್, ನರ್ಸ್‌ಗಳೇ ಅಂದು ನನಗೆ ನಿಜವಾದ ದೇವರಂತೆ ಕಂಡರು!

# ನಾರ್ಮಲ್ ಡೆಲಿವರಿ... ಥ್ಯಾಂಕ್ಯೂ ದೇವರೇ!

ನನ್ನವಳಿಗೆ ನವಮಾಸ ತುಂಬಿ ದಿನದಾಗ ಬೀಳುತ್ತಲೇ ಏನೋ ಆತಂಕ, ಏನೋ ಒಂಥರಾ ಭಯ. ಇದರ ನಡುವೆ ಪ್ರೀತಿಯಿಂದ ಮೊದಲೆ ಹೇಳಿದ್ದಳು. ರೀ, ಈ ಬಾರಿ ಹೆರಿಗೆ ಸಮಯದಲ್ಲಿ ನೀವು ನನ್ನ ಜೊತೆಯಲ್ಲಿರಬೇಕು. ನನಗ್ಯಾಕೋ ತುಂಬಾ ಅಂದರೆ ತುಂಬಾ ಭಯವಾಗ್ತಿದೆ. ಮೊದಲನೇ ಹೆರಿಗೆಯಲ್ಲಿ ಹೀಂಗ ಅನ್ನಿಸಿರಲಿಲ್ಲ ಅಂದಾಗ 'ನಾನಿದ್ದಿನಲ್ಲ, ನೀ ಯಾಕ ಚಿಂತಿ ಮಾಡ್ತಿ, ಆರಾಮ್ ಇರು' ಅಂತ ಸಮಾಧಾನ ಮಾಡ್ತಾ ದಿನಗಳುರುಳುತ್ತಲೇ ಹೆರಿಗೆಯ ದಿನ ಬಂದೇಬಿಟ್ಟಿತು.

ಆ ದಿನ ಮಧ್ಯಾಹ್ನ ಆಸ್ಪತ್ರೆಗೆ ಹೋಗಿ ಬರುವುದಾಗಿ ಮಾತ್ರ ಹೇಳಿದ್ದಳು. ಆದ್ದರಿಂದ ನಾನು ಯಥಾ ಪ್ರಕಾರ ನನ್ನ ಶಾಲೆಯ ಕೆಲಸ ಮುಗಿಸಿ ಇನ್ನೂ ಮನೆಗೆ ತಲುಪಿರಲಿಲ್ಲ. ಅವಳ ಫೋನ್ ಕರೆ ಬಂತು. ಜೊತೆಗೆ ಹೆರಿಗೆಯ ದಿನವೂ ಹೌದು. ರೀ ಎಲ್ಲಿದ್ದೀರಾ ಆಸ್ಪತ್ರೆಗೆ ಹೋಗ್ತಾ ಇದ್ದೇನೆ ಬೇಗ ಬನ್ನಿ, ಸ್ವಲ್ಪ ಮಟ್ಟಿಗೆ ನೋವು ಕಾಣಿಸ್ತಿದೆ, ಭಯದಲ್ಲಿದ್ದೇನೆ ಬೇಗ ಬನ್ನಿ, ಕೂಡಲೇ ಬಂದ್ಬಿಡಿ ಎಂದು ಒಂದೇ ಮಾತಿನಲ್ಲಿ ಫೋನ್ ಕಟ್ ಮಾಡಿದಳು. ಸರಿ ನಾನು ಕೂಡಲೇ ಹೊರಡ್ತೀನಿ ಎಂದಾಗ ನೇಸರ ಪಡುವಣದೆಡೆಗೆ ಸಾಗಿ ವಿರಮಿಸಿದ.

ನಾನು ಆಸ್ಪತ್ರೆಗೆ ಹೊರಡುವ ಧಾವಂತದಲ್ಲಿ, ಒಂದೆರಡು ದಿನಕ್ಕಾಗುವಷ್ಟು ಬಟ್ಟೆಬರೆ ಜೋಡಿಸಿಕೊಂಡು ಬ್ಯಾಗ್ ಹೆಗಲಿಗೆ ಹಾಕಿ, ಬೈಕ್ ಸ್ಟಾರ್ಟ್ ಮಾಡಿದೆ. ರಾತ್ರಿ ಏಳುವರೆ ಆಗುವಷ್ಟರಲ್ಲಿ ಆಸ್ಪತ್ರೆಗೆ ದೌಡಾಯಿಸಿದೆ. ಅವಳ ಮುಖವನ್ನೊಮ್ಮೆ ನೋಡಿ, ತಲೆಯ ಮೇಲೆ ಕೈಯಾಡಿಸಿ, ಮೆಲ್ಲಗೆ ನೇವರಿಸುತ್ತಾ 'ಏನಾಗಲ್ಲ .ನಿನ್ನ ಆಸೆಯಂತೆ ನಾನು ನಿನ್ನ ಬಳಿಯಲ್ಲಿಯೇ ಇರುವೆ, ನಿನ್ನ ಜೊತೆಯಲ್ಲಿಯೇ ಇರುವೆ...' ಎಂದಾಗ ಅವಳ ಮುಖದ ನಗುವನ್ನು ನೋಡಬೇಕಿತ್ತು! ಅಂತಹ ಅಸಾಧ್ಯ ನೋವಲ್ಲೂ ಮಂದಹಾಸ ಸೂಸುತ್ತ... ಅಸಾಧ್ಯವಾದ, ತಾಳಲಾರದ ನೋವನ್ನೂ ಸಾವರಿಸಿಕೊಂಡು, ಕೈಯನ್ನು ಗಟ್ಟಿಯಾಗಿ ಅವುಚಿ ಹಿಡಿದುಕೊಂಡಳು.

'ರೀ ನನಗೆ ಏನೂ ಆಗಲ್ಲ ತಾನೇ?' ಅಂತ ಮತ್ತೆ ಮರು ಪ್ರಶ್ನೆ ಹಾಕಿದಳು. ಇಲ್ಲ ನಿನಗೇನಾಗುತ್ತೆ...! ಜೊತೆಯಲ್ಲಿ ನಾನಿಲ್ಲವೇ, ಧೈರ್ಯವಾಗಿರು, ಇದೇನು ಮೊದಲನೇ ಸಲವಾ ಭಯಪಡಲು. ಏನೂ ಆಗಲ್ಲ ನಿನಗೆ ಯಾವ ಮಗು ಬೇಕು ಅಂತ ಮನಸ್ಸಿನಲ್ಲಿ ನೀನು ಪೂಜೆ ಮಾಡುವ, ನಂಬಿದ ದೇವರ ಹತ್ತಿರ ಪ್ರಾರ್ಥನೆ ಮಾಡ್ಕೋ.



ಆ ಭಗವಂತ ಇದ್ದದ್ದೇ ನಿಜವಾದರೆ ನೀನು ಅಂದುಕೊಂಡಿದ್ದನ್ನು ಕೊಟ್ಟರೂ ಕೊಡಬಹುದು' ಅಂತ ಅವಳ ಸಮಾಧಾನಕ್ಕೆ ಏನೇನೋ ಡೈಲಾಗ್ ಹೊಡೆದೆ.

ಹೊರಗಡೆಯಿಂದ ಊಟ ಕಟ್ಟಿಸಿಕೊಂಡು ಬರೋಣವೆಂದು ಖಾನಾವಳಿಗೆ ಹೊರಟಿದ್ದೆ. ಆಗ ನನ್ನ ಕೈ ಹಿಡಿದು 'ರೀ, ಬೇಗ ಬನ್ನಿ. ನನಗೆ ಭಯ ಆಗ್ತಿದೆ. ನೀವು ಊಟ ತರಬೇಕು ಅಂತ ಹೋದಾಗ ಡೆಲಿವರಿ ಆದರೆ?' ಅಂತ ಮತ್ತದೇ ಪ್ರಶ್ನೆ ಅವಳದು. ಆದಷ್ಟು ಬೇಗ ಬರ್ತೀನಿ ಅಂತ ಹೊರಟೆ. ಹೋಟೆಲ್‌ಗೆ ಹೊರಡುವ ದಾರಿಯುದ್ದಕ್ಕೂ ಅವಳ ಹೆರಿಗೆಯ ಯೋಚನೆ. ನಾನು ದೇವರನ್ನು ಅಷ್ಟಾಗಿ ನಂಬುವುದಿಲ್ಲ. ಆದರೂ ಹೆಂಡತಿಗಾಗಿ, ಅವಳ ಹೆರಿಗೆಗಾಗಿ ಅವತ್ತು ಮನಸ್ಸಿನಲ್ಲಿ ದೇವರೇ ನೀನೇ ನಿನ್ನ ಭಕ್ತಳನ್ನು ಕಾಪಾಡು ಎಂದು ಪ್ರಾರ್ಥಿಸಿಕೊಳ್ಳುತ್ತಾ ಅವಸರವಸರವಾಗಿ ಪಾರ್ಸೆಲ್ ತೆಗೆದು-ಕೊಂಡು ಬಂದೆ. ಅತ್ತೆ ನಾನು ಮತ್ತೆ ಹೆಂಡತಿ ಮೂವರು ಅವಳ ಹೆರಿಗೆಯ ಗುಂಗಿನಲ್ಲಿಯೇ ಒಂದಷ್ಟು ಊಟ ಮಾಡಿ ಮುಗಿಸಿದೆವು.

ಇನ್ನೇನು ನಿದ್ರಾದೇವಿ ಆವರಿಸುವ ಸಮಯ. ನಿದ್ರೆಗೆ ಕಾಲು ಚಾಚುವ ಎಂದು ಕಾಯುತ್ತಿರುವಾಗಲೇ ಕಾಲ ಹೆರಿಗೆಯ ಸಮಯಕ್ಕಾಗಿ ಕಾದು ಕುಳಿತಿತ್ತು. ಅವಳನ್ನು ಕೂಡಲೇ ಹೆರಿಗೆಯ ರೂಮಿಗೆ ಶಿಫ್ಟ್ ಮಾಡಿದರು. ಡಾಕ್ಟರ್ ಹೆರಿಗೆಗೆ ಬೇಕಾದ ಸಕಲ ಸಿದ್ಧತೆಯನ್ನು, ವ್ಯವಸ್ಥೆಯನ್ನು ಮಾಡಿಕೊಳ್ಳಲು ತಮ್ಮ ಸಿಬ್ಬಂದಿಗೆ ತಿಳಿಸಿದರು.

ಇಬ್ಬರು ತುಂಬಾ ಅನುಭವದಿಂದ ಸಾಕಷ್ಟು ಹೆರಿಗೆಗಳನ್ನು ಮಾಡಿಸಿದ ಹಿರಿಯ ದಾದಿಯರು, ಒಬ್ಬರು ಸಹಾಯಕರು ಇದ್ದರು. ಅವರಿಗೆ ಕೇಳಿಕೊಂಡದ್ದಿಷ್ಟೇ ಮಗು ಗಂಡಿರಲಿ, ಹೆಣ್ಣಿರಲಿ ಅದನ್ನು ಸುರಕ್ಷಿತವಾಗಿ ಹೆರಿಗೆ ಮಾಡಿಸುವಂತೆ ವಿನಂತಿಸಿಕೊಂಡೆವು. ಅವರು ತಮ್ಮ ಸ್ವಂತ ಮಗಳಂತೆಯೇ ನನ್ನ ಹೆಂಡತಿಯನ್ನು ಹಚ್ಚಿಕೊಂಡಿದ್ದರು. 'ನೀವೇನು ಯೋಚನೆ ಮಾಡಬೇಡಿ ಸರ್ ಅವರಿಬ್ಬರಿಗೂ ಏನೂ ತೊಂದರೆ ಆಗದಂತೆ ನಾವು ನೋಡಿಕೊಳ್ಳುತ್ತೇವೆ' ಎಂಬ ಭರವಸೆಯ ಮಾತುಗಳು ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಮಾಡಿದವು.

ಹೆರಿಗೆಯ ರೂಮಿನಲ್ಲಿ ಅದೆಷ್ಟು ನೋವನ್ನು ಸಹಿಸಿಕೊಂಡಳೋ ಆ ದೇವರಿಗೆ ಗೊತ್ತು. ಅಸಾಧ್ಯ ನೋವನ್ನು ತಾಳಲಾರದೆ ಒಂದು ಕ್ಷಣ 'ನನಗೆ ಸಿಜೇರಿಯನ್ ಮಾಡಿಸಿಬಿಡಿ. ನಾರ್ಮಲ್ ಡೆಲಿವರಿ ಆಗುವವರೆಗೆ ನೋವು ತಡೆದುಕೊಳ್ಳಲಾರೆ' ಎಂದು ಚೀರಾಡತೊಡಗಿದಳು. 'ಇಲ್ಲಮ್ಮ, ನಿನಗೆ ನಾರ್ಮಲ್ ಡೆಲಿವರಿ ಆಗುತ್ತೆ, ಸುಮ್ಮನೆ ಯಾಕೆ ಸಿಜೇರಿಯನ್ ಮಾಡುವುದು, ಒಂದು ಸಲ ಸಿಜೇರಿಯನ್ ಮಾಡಿದರೆ ಜೀವನವಿಡಿ ನೀನು ತುಂಬಾ ಒದ್ದಾಡಬೇಕಾಗುತ್ತದೆ. ಅದರ ಬದಲು ಸ್ವಲ್ಪ ಸಹನೆಯಿಂದ ಇದ್ದರೆ, ಸ್ವಲ್ಪ ನೋವನ್ನು ಸಹಿಸಿಕೊಂಡರೆ ಬದುಕಿನದ್ದಕ್ಕೂ ಗಟ್ಟಿಮುಟ್ಟಾಗಿ, ಆರೋಗ್ಯವಂತಳಾಗಿ ಇರಬಹುದಮ್ಮ' ಎನ್ನುವ ಅವರ ಮಾತು ನನಗೆ ತುಂಬಾ ಹಿಡಿಸಿದವು.

ಕೆಲವೇ ನಿಮಿಷಗಳಲ್ಲಿಯೇ ಮುದ್ದಾದ ಮಗುವಿಗೆ ಜನ್ಮವಿತ್ತಳು. ಅಷ್ಟು ನೋವು ಅನುಭವಿಸಿದವಳು ಮಗುವಿನ ಅಳು, ಮಗುವಿನ ನಗು ಕೇಳಿದ ಕೂಡಲೇ ನೋವನ್ನೆಲ್ಲ ಮರೆತು ನೆಮ್ಮದಿಯ ಹೂನಗೆಯ ಚೆಲ್ಲಿದಳು. ಅನುಭವದಲ್ಲಿ ಅಮೃತವಿದೆ ಎನ್ನುವ ಮಾತಿನಂತೆ ಮಾಗಿದ ಜೀವಗಳು ನಾರ್ಮಲ್ ಡೆಲಿವರಿ ಮಾಡಿ, ಮಗುವನ್ನು ನನ್ನ ಕೈಗಿಟ್ಟಾಗ ಆನಂದದ ಕಟ್ಟೆಯ ಎಲ್ಲೆ ಮೀರಿತ್ತು. ಮಗುವನ್ನೊಮ್ಮೆ, ಮಗು ಮನದ ಮಡದಿಯನೊಮ್ಮೆ ನೋಡಿ ಮಾತು ಬಾರದೆ ಮೌನಕ್ಕೆ ಶರಣಾದೆ. ನಾನು ದೇವರನ್ನಂತೂ ನೋಡಿಲ್ಲ, ದೇವರ ರೂಪದ ಡಾಕ್ಟರ್ ಮತ್ತು ನರ್ಸ್‌ಗಳು ಅಂದು ನನಗೆ ನಿಜವಾಗಿ ದೇವರಂತೆ ಕಂಡರು. ಥ್ಯಾಂಕ್ಯೂ ದೇವರೇ ಎಂದು ಅವರಿಗೆ ಕೈ ಮುಗಿದು ಕೃತಜ್ಞತೆ ಸಲ್ಲಿಸಿದೆ.



– ಈಶ್ವರ ಕುರಿ (ಜಕ್ಕಲಿ).

## ಫಲಿತಾಂಶ ಸುಧಾರಣೆಗೆ ಪಣ

■ ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ



ಅಖಂಡ ಬಳ್ಳಾರಿ ಜಿಲ್ಲೆಯಲ್ಲೇ ವಿದ್ಯಾಸಿರಿ ನಾಡು ಎಂದು ಹೆಸರಾಗಿರುವ ಹರಪನಹಳ್ಳಿಯು ಕಳೆದ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಾಧಿಸಿದ ಶೇ.91.47 ಫಲಿತಾಂಶವನ್ನು ಇನ್ನಷ್ಟು ಸುಧಾರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದಾರೆ.

ಶಾಲಾ ಆವರಣದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳ ಜೊತೆಯಲ್ಲಿ ವಿಶೇಷವಾಗಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಗುಂಪು ಚರ್ಚೆ, ರಸಪ್ರಶ್ನೆ ಮೂಲಕ ಮಕ್ಕಳ ಕಲಿಕೆಯ ಗುಣಮಟ್ಟವನ್ನು ಸುಧಾರಿಸುವುದಲ್ಲದೆ, ಗೈರು ಹಾಜರಾತಿ, ಕಲಿಕೆಯಲ್ಲಿ ಹಾಗೂ ಇತರೆ ಕಾರಣಗಳಿಂದ ಶಿಕ್ಷಣದಲ್ಲಿ ಹಿಂದುಳಿದ ಮಕ್ಕಳನ್ನು ಆಯ್ದ ಶಿಕ್ಷಕರಿಂದ ದತ್ತು ಮಕ್ಕಳಂತೆ ಸ್ವೀಕರಿಸಿ, ವಿದ್ಯಾರ್ಥಿಗಳ ಮನೆಗೇ ತೆರಳಿ ವಿದ್ಯಾರ್ಥಿಗಳ ಕಲಿಕೆಯ ಬಗ್ಗೆ ಹೆಚ್ಚಿನ ಗಮನ ಹರಿಸಲು ಪಾಲಕರನ್ನೂ ಪ್ರೇರೇಪಿಸುತ್ತಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ಯು. ಬಸವರಾಜಪ್ಪ ಮಾತನಾಡಿ, ಕಳೆದ ವರ್ಷದ ಫಲಿತಾಂಶವು ಶೇ.91.47 ಇದ್ದು, ಈ ಬಾರಿ ಶೇ.100ರಷ್ಟು ಫಲಿತಾಂಶದ ಗುರಿ ಹೊಂದಿದ್ದೇವೆ. ಶಾಲೆಗಳಲ್ಲಿ ವಿವಿಧ ಯೋಜನೆ ಅಳವಡಿಕೆ ಮತ್ತು ತಂತ್ರಜ್ಞಾನ ಬಳಕೆಯ ಮೂಲಕ ಮಕ್ಕಳ ಶಿಕ್ಷಣದ ಗುಣಮಟ್ಟ ಸುಧಾರಿಸಲು ಕಾರ್ಯಪ್ರವೃತ್ತರಾರುವಂತೆ ಎಲ್ಲಾ ಮುಖ್ಯೋಪಾಧ್ಯಾಯರಿಗೆ ಸಲಹೆ ನೀಡಲಾಗಿದೆ ಎಂದರು.

ಗೋವೇರಹಳ್ಳಿ ಸರಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಂ.ಬಿ. ಶಿವಾಜಿ ಮಾತನಾಡಿ, ಗೈರು ಹಾಜರಾತಿ, ತರಗತಿಯಲ್ಲಿ ತುಂಟತನ ಹಾಗೂ ಕಲಿಕೆಯಲ್ಲಿ ಕಡಿಮೆ ಆಸಕ್ತಿಯುಳ್ಳ ಮಕ್ಕಳನ್ನು ದತ್ತು ತೆ-ಗೆದುಕೊಂಡು ತರಗತಿಯಲ್ಲಷ್ಟೇ ಅಲ್ಲದ್ದೇವರ ಮನೆಗಳಿಗೆ ಎರಡು ದಿನಕ್ಕೊಮ್ಮೆ ಅಥವಾ ವಾರಕ್ಕೊಮ್ಮೆ ಭೇಟಿ ನೀಡಿ ಅವರ ಸುಧಾರಣೆ ಬಗ್ಗೆ ಗಮನಹರಿಸುತ್ತಿದ್ದೇವೆ ಎಂದರು.

## ಕರಾಟೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ



ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಯ 4ನೇ ತರಗತಿಯ ವಿದ್ಯಾರ್ಥಿ ಆಯಿಲ್ ಗಾಡಿ, ಚಿತ್ರದುರ್ಗದಲ್ಲಿ ಇತ್ತೀಚೆಗೆ ಜರುಗಿದ 29ನೇ ಅಖಿಲ ಭಾರತ ಮುಕ್ತ ಕರಾಟೆ ಚಾಂಪಿಯನ್‌ಶಿಪ್‌ನ ಸಹಯೋಗದಲ್ಲಿ ಬ್ರೈಟ್ ಸ್ಟಾರ್ ಕರಾಟೆ ಅಸೋಸಿಯೇಷನ್ ಅಡಿಯಲ್ಲಿ ಜರುಗಿದ ಕರಾಟೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾನೆ.

## ಮುಂಗಡ ಪತ್ರ ದೇಶದ ಅಭಿವೃದ್ಧಿಯ ದಿಕ್ಸೂಚಿ




■ ವಿಜಯಸಾಕ್ಷಿ ಸುದ್ದಿ, ಗದಗ

ಪ್ರಪಂಚದ ಪ್ರತಿಯೊಂದು ದೇಶಗಳು ತಮ್ಮ ಹಣಕಾಸು ಸಂಪನ್ಮೂಲಗಳಿಂದ ಕಲ್ಯಾಣ ರಾಷ್ಟ್ರ ಕಟ್ಟಲು ಪರಿಶ್ರಮಿಸುತ್ತಿವೆ. ಅಂತಹ ಹಣಕಾಸು ಸಂಪನ್ಮೂಲಗಳನ್ನು ಸಂಗ್ರಹಿಸುವ ಹಾಗೂ ವೆಚ್ಚ ಮಾಡುವ ರೀತಿ ತಿಳಿಯಲು ಮುಂಗಡ ಪತ್ರ ಒಂದು ದಿಕ್ಸೂಚಿಯಾಗುವುದು ಎಂದು ಎಂ.ಎಂ. ಮಹಾವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಬಿ.ಎಂ. ನದ್ದಿಮುಲ್ಲಾ ತಿಳಿಸಿದರು.

ಸ್ಥಳೀಯ ಪಂ. ಪಂಚಾಕ್ಷರ ಗವಾಯಿಗಳ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಅರ್ಥಶಾಸ್ತ್ರ ವಿಭಾಗ ಹಾಗೂ ಯೋಜನಾ ವೇದಿಕೆ ಆಶ್ರಯದಲ್ಲಿ 'ಕೇಂದ್ರ ಮುಂಗಡ ಪತ್ರ-ಒಂದು ವಿಶ್ಲೇಷಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶ ಸಾರ್ವಜನಿಕ ಸಾಲದ ಸುಳಿಯಿಂದ ಹೊರಬರಬೇಕು. ಅಂದಾಗ ಸಮಗ್ರ ಆರ್ಥಿಕ ಅಭಿವೃದ್ಧಿಯಾದಂತೆ ಎಂದು ತಿಳಿಸಿ, ವಿದ್ಯಾರ್ಥಿಗಳೊಂದಿಗೆ ಮುಂಗಡ ಪತ್ರಕ್ಕೆ ಸಂಬಂಧಿಸಿದ ಸಂವಾದ ಕಾರ್ಯಕ್ರಮ ನಡೆಸಿಕೊಟ್ಟರು.

ಡಾ. ವಿ.ವಿ. ನಿಂಗೋಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಪ್ರಾ. ಜಿ.ಎಸ್. ಯತ್ನಟ್ಟಿ ವಹಿಸಿದ್ದರು. ವೇದಿಕೆಯಲ್ಲಿ ಸುಭಾಸ ಓಂಕಾರ ಉಪಸ್ಥಿತರಿದ್ದರು. ಮಂಜುನಾಥ ಬಡಿಗೇರ ಸ್ವಾಗತಿಸಿದರೆ, ಪ್ರೊ. ಮಂಜುಳಾ ಹೊಂಬಾಳಿ ಕಾರ್ಯಕ್ರಮ ನಿರೂಪಿಸಿದರು. ಸಂಜನಾ ಕಟಾರೆ ವಂದಿಸಿದರು.

## ಉತ್ತಮ ವ್ಯಕ್ತಿತ್ವದೊಂದಿಗೆ ಉತ್ತಮ ಪ್ರಜೆಗಳಾಗಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ




ಪಟ್ಟಣದ ಬಿ.ಸಿ.ಎನ್ ಪಾಲಿಟೆಕ್ನಿಕ್ ಕಾಲೇಜಿನ ಆವರಣದಲ್ಲಿರುವ ವಡವಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಶಾಲಾ ವಾರ್ಷಿಕ ಕ್ರೀಡಾಕೂಟವು ಇತ್ತೀಚೆಗೆ ನೆರವೇರಿತು. ಕಾರ್ಯಕ್ರಮದಲ್ಲಿ ವಡೆಂಯುರವುಲ್ಲಾಪೂರ ಮೊರಾರ್ಜಿ ವಸತಿ ಶಾಲೆಯ ಪ್ರಾಚಾರ್ಯೆ ಡಿ.ಸಿ. ನರೆಗಲ್ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸಕ್ಕೆ ಪಠ್ಯ ವಿಷಯ ಮಾತ್ರವಲ್ಲದೇ ಪಠ್ಯೇತರ ಕಲಿಕೆಯೂ ಅತ್ಯವಶ್ಯ. ಶಾಲಾ-ಕಾಲೇಜುಗಳಲ್ಲಿ ಕ್ರೀಡೆ, ಕಲೆ, ಸಾಹಿತ್ಯ ಸೇರಿದಂತೆ ವಿವಿಧ ಆಯಾಮಗಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು. ಮಕ್ಕಳು ಶಿಕ್ಷಕರ ಮಾರ್ಗದರ್ಶನದಂತೆ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಉತ್ತಮ ವ್ಯಕ್ತಿತ್ವದೊಂದಿಗೆ ದೇಶದ ಉತ್ತಮ ಪ್ರಜೆಯಾಗಬೇಕು ಎಂದರು.

ಸಭೆಯ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯ ಎನ್.ಸಿ.ಕೆ. ಪಾಟೀಲ ವಹಿಸಿದ್ದರು. ಅತಿಥಿಗಳಾಗಿ ಸುನೀಲ ತಳ್ಳಳ್ಳಿ, ಎಸ್.ಬಿ. ಉಮಚಗಿ, ಆಯ್.ಎಸ್. ನವಲಿ, ಎನ್.ಜಿ. ಹೊತ್ತಿಕೋಟಿ, ಮಾಂತೇಶ ನೂಲ್ವಿ, ಮಾಂತೇಶ ಕಲಾಠಿ, ಸೋಮು ಚೋಳಿನ, ನಂದಾ ಪತ್ತಾರ, ಸಾವಿತ್ರಿ ಪ್ಯಾಟಿ, ಹುಸೇನಬಿ ನಧಾಪ, ಎಂ.ಬಿ. ದೊಡ್ಡಮನಿ, ಎಸ್.ಸಿ. ಪಾಟೀಲ ಮತ್ತು ಶಾಲಾ ಸಂಸತ್ ಪ್ರಧಾನಿ ಸಹನಾ ಯಲವಿಗಿ, ಕ್ರೀಡಾ ಮಂತ್ರಿ ಕೃಷ್ಣ ಲಮಾಣಿ, ಶೃತಿ ಲಮಾಣಿ ಮುಂತಾದವರಿದ್ದರು. ವಿದ್ಯಾರ್ಥಿಗಳಾದ ಅಭಿನಯಾ ಕಮ್ಮಾರ, ಮಾಂತೇಶ ಹುಲಕೋಟಿ, ಮಂಜುನಾಥ ಲಮಾಣಿ ನಿರೂಪಿಸಿದರು.

ಕಾರ್ಯಕ್ರಮಕ್ಕೆ ಆಗಮಿಸಿದ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ ಕ್ರೀಡಾಕೂಟವನ್ನು ಯಶಸ್ವಿಯಾಗಿ, ಅಚ್ಚುಕಟ್ಟಾಗಿ ಆಯೋಜಿಸಿರುವದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

## ಸದ್ಭಾವನೆಯಿಲ್ಲದ ಯಾವುದೇ ಸೇವೆ ವ್ಯರ್ಥ



■ ವಿಜಯಸಾಕ್ಷಿ ಸುದ್ದಿ, ಶಿಕಾರಿಪುರ

ಗುರುವು ಪ್ರತ್ಯಕ್ಷ ದೇವರಾಗಿದ್ದಾನೆ. ಗುರು ಸಾನ್ನಿಧ್ಯಕ್ಕೆ ಶರಣಾಗತಿ ಹೊಂದಿದಾಗ ಎಲ್ಲವೂ ಪ್ರಾಪ್ತವಾಗುತ್ತದೆ ಎಂದು ಕಾಶೀ ಜಂಗಮವಾಡಿ ಪೀಠದ ಹಿರಿಯ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ನುಡಿದರು.

ಅವರು ಕಡೇನಂದಿಹಳ್ಳಿ ಶ್ರೀ ಗುರು ರೇವಣಸಿದ್ಧೇಶ್ವರ ಪುಣ್ಯಾಶ್ರಮದಲ್ಲಿ ಜರುಗಿದ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಪರಶಿವನ ಪಂಚ ಮುಖಗಳಿಂದ ಅವತರಿಸಿದ ಶ್ರೀ ಜಗದ್ಗುರು ಪಂಚಾಚಾರ್ಯರು ನಾಲ್ಕೂ ಯುಗಗಳಲ್ಲಿ ಆವಿರ್ಭವಿಸಿ ಸನಾತನ ವೀರಶೈವ ಧರ್ಮ ಸಂಸ್ಥಾಪನೆಯೊಂದಿಗೆ ಜನರಿಗೆ ಧರ್ಮ ಸಂಸ್ಕಾರ ಬೋಧನೆ ಮಾಡಿ ಉದ್ಧರಿಸಿದ್ದಾರೆ. ವಿವಿಧ ಪ್ರಾಂತ್ಯ ಪ್ರದೇಶಗಳಲ್ಲಿ ಸಹಸ್ರಾರು ಶಾಖಾ ಮಠಗಳನ್ನು ಸ್ಥಾಪಿಸಿ ಜನತೆಗೆ ಸಂಸ್ಕಾರ ನೀಡಿದ್ದಾರೆ. ಸದ್ಭಾವನೆ ಇಲ್ಲದೇ ಮಾಡುವ ಯಾವುದೇ ಸೇವೆ ವ್ಯರ್ಥ. ಗುರುವಿಗೆ ವೀರಶೈವ ಧರ್ಮದಲ್ಲಿ ಅಗ್ರಸ್ಥಾನ ನೀಡಿದ್ದು, ಗುರು ಸೇವೆಯನ್ನು ಶ್ರದ್ಧಾ-ಭಕ್ತಿಯಿಂದ ಭಾವನಾತ್ಮಕವಾಗಿ ಮಾಡಬೇಕು ಎಂದರು.

ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿ ಮಾತನಾಡಿ, ತಾಯಂದಿರು ಮಕ್ಕಳಿಗೆ ಸಂಸ್ಕಾರ ಬಲ ನೀಡಬೇಕು. ಆ ಸಂಸ್ಕಾರ ಬಲದಿಂದ ಮಕ್ಕಳು ಸದ್ಗುಣಿಗಳಾಗಿ ಸಮಾಜದಲ್ಲಿ ಗೌರವದಿಂದ ಬಾಳಲು ಸಾಧ್ಯವಾಗುತ್ತದೆ ಎಂದರು.

ನಾಗವಂದ ಶಿವಯೋಗಿ ಶಿವಾಚಾರ್ಯರು, ಚನ್ನಗಿರಿ ಕೇದಾರ ಶಿವಶಾಂತವೀರ ಶಿವಾಚಾರ್ಯರು, ಚನ್ನಗಿರಿ ಡಾ. ಬಸವ ಜಯಚಂದ್ರ ಸ್ವಾಮಿಗಳು, ಕಡೇನಂದಿಹಳ್ಳಿ ವೀರಭದ್ರ ಶಿವಾಚಾರ್ಯರು, ಹಾರನಹಳ್ಳಿ ಶಿವಯೋಗಿ ಶಿವಾಚಾರ್ಯರು, ಕಾರ್ಜುವಳ್ಳಿ ಸದಾಶಿವ ಶಿವಾಚಾರ್ಯರು, ಉಪಸ್ಥಿತರಿದ್ದರು. ವಿವಿಧ ಕ್ಷೇತ್ರಗಳ ಗಣ್ಯರಿಗೆ, ಸೇವಾರ್ಥಿಗಳಿಗೆ ಗುರುರಕ್ಷೆ ನೀಡಿ ಗೌರವಿಸಲಾಯಿತು. ವೀರೇಂದ್ರ ಪಾಟೀಲ ಬಂಕವಳ್ಳಿ ನಿರೂಪಿಸಿದರು.

ರೋಣದ ರೇಣುಕಯ್ಯ ಶಾಸ್ತ್ರಿಗಳಿಂದ ಶ್ರೀ ಜಗದ್ಗುರು ರೇಣುಕ ವಿಜಯ ಪುರಾಣ ಪ್ರವಚನ ಜರುಗಿತು.

### 'ಸಂವಿಧಾನ ಜಾಗೃತಿ ಅಭಿಯಾನ' ಕಾರ್ಯಕ್ರಮದಲ್ಲಿ ರವಿ ಗುಂಜೀಕರ ಅಭಿಪ್ರಾಯ

# ಭಾರತದ ಸಂವಿಧಾನ ನಮ್ಮೆಲ್ಲರ ಹೆಮ್ಮೆ

■ ವಿಜಯಸಾಕ್ಷಿ ಸುದ್ದಿ, ಗದಗ

ಕಳೆದ 75 ವರ್ಷಗಳಲ್ಲಿ ಭಾರತದಲ್ಲಾದ ಸಾಮಾಜಿಕ ಬದಲಾವಣೆಗಳ ಹಿಂದೆ ಭಾರತದ ಶ್ರೇಷ್ಠ ಸಂವಿಧಾನದ ಪಾತ್ರ ಬಹು ಮುಖ್ಯವಾಗಿದೆ ಎಂದು ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ, ಸಂವಿಧಾನ ಜಾಗೃತಿ ಅಭಿಯಾನದ ಗಜೇಂದ್ರಗಡ ತಾಲೂಕು ನೋಡಲ್ ಅಧಿಕಾರಿ ರವಿ ಗುಂಜೀಕರ ಅಭಿಪ್ರಾಯಪಟ್ಟರು.

ಗಜೇಂದ್ರಗಡದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಸಹಯೋಗದಲ್ಲಿ ಜರುಗಿದ 'ಸಂವಿಧಾನ ಜಾಗೃತಿ ಅಭಿಯಾನ' ಉದ್ಘಾಟಿಸಿ ಅವರು ಮಾತನಾಡಿದರು.

ಭಾರತಕ್ಕೆ ಸ್ವಾತಂತ್ರ □□ ಸಿಕ್ಕ ನಂತರ ಡಾ. ಬಿ.ಆರ್. ಅಂಬೇಡ್ಕರರನ್ನು ಕರಡು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಯಿತು. ಸಂವಿಧಾನ ರಚಿಸುವ ಸಂಪೂರ್ಣ ಹೊಣೆ ಹೊತ್ತ ಬಾಬಾಸಾಹೇಬ ಅಂಬೇಡ್ಕರರು ಇಂಗ್ಲೆಂಡ್, ಜಪಾನ್, ಬ್ರಿಟನ್, ಅಮೆರಿಕಾ, ರಷ್ಯಾ ಸೇರಿದಂತೆ ಹಲವು ದೇಶಗಳೊಂದಿಗೆ ನಿರಂತರ ಚಿಂತನ-ಮಂಥನ ನಡೆಸಿ, ಕಠಿಣ ಪರಿಶ್ರಮದಿಂದ ಲಿಖಿತ ರೂಪದ ಬೃಹತ್ ಸಂವಿಧಾನದ ಕೊಡುಗೆ ನೀಡಿದ್ದು ನಮಗೆಲ್ಲರಿಗೂ ಹೆಮ್ಮೆ ಮತ್ತು ಅಭಿಮಾನದ ಸಂಗತಿಯಾಗಿದೆ ಎಂದರು.



ಭಾರತದ ಸಂವಿಧಾನ ಅಂಗೀಕಾರಗೊಂಡು 75 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸಾರ್ವಜನಿಕರಲ್ಲಿ ಸಂವಿಧಾನದ ಮಹತ್ವ ಕುರಿತು ಜಾಗೃತಿ ಮೂಡಿಸಲು ಜ.26ರಿಂದ ಫೆಬ್ರವರಿ 26ರವರೆಗೆ ಸ್ತಬ್ಧ ಚಿತ್ರಗಳನ್ನು ಪ್ರದರ್ಶಿಸಿ, ತನ್ಮೂಲಕ ಅರಿವು ಮೂಡಿಸುವುದೇ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ. ಸ್ವತಂತ್ರ ಭಾರತದ ಆಡಳಿತ ಅವಧಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ ಅವರು ಕಾನೂನು ಸಚಿವರಾಗಿ ದೇಶ ಸೇವೆಯಲ್ಲಿದ್ದರು. ಸಂವಿಧಾನ ರಚಿಸಿ ಸಂಸತ್ತಿನಲ್ಲಿ ಮಂಡಿಸುವ ಸಮಯದಲ್ಲಿ ಪ್ರತಿಯೊಬ್ಬರಿಗೂ ಮತದಾನದ ಹಕ್ಕನ್ನು ಕೊಡಿಸಬೇಕು ಎಂದು ಪ್ರತಿಪಾದಿಸಿದ್ದರು.

> ಉಪನ್ಯಾಸಕರಾದ ಕಮ್ಮಾರ ಮಾತನಾಡಿ, ಈ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಸಂವಿಧಾನದ ಆಶಯಗಳನ್ನ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಡಾ. ಬಿ.ಆರ್. ಅಂಬೇಡ್ಕರ ಅವರನ್ನು ನಿರಂತರವಾಗಿ ಸ್ಮರಿಸಿ ಗೌರವಿಸಬೇಕು ಎಂದು ತಿಳಿಸಿ, ಸಂವಿಧಾನದ ಮಹತ್ವದ ಕುರಿತು ವಿವರಿಸಿದರು.

ಸಂವಿಧಾನದ ಧ್ಯೇಯೋದ್ದೇಶಗಳು ಜಿಲ್ಲೆಯ ಮನೆ ಮನೆಗೆ ತಲುಪುತ್ತಿರುವುದು ಸಂತಸದ ವಿಷಯವಾಗಿದೆ ಎಂದು ರವಿ ಗುಂಜೀಕರ ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯರಾದ ವೀರಣ್ಣ ಶೆಟ್ಟರ, ರವಿ ಬಿದರೂರ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ಅಧಿಕಾರಿ ಗೀತಾ ಆಲೂರ, ರೋಣ ತಾಲೂಕು ಸಮಾಜ ಕಲ್ಯಾಣ ಅಧಿಕಾರಿ ಎಚ್.ಕೆ. ಚುಂಚಾ, ಗ್ರಾ.ಪಂ ಅಧ್ಯಕ್ಷೆ ಮಲ್ಲಮ್ಮ, ಬಸವರಾಜ ಕಲಬಿನ್ನ, ಜಗದೀಶ ಹಿರೇಮಠ, ಶಶಿ ವಕ್ಕಲರ, ಗ್ರಾ.ಪ ಸದಸ್ಯರು, ವಿವಿಧ ಸಂಘಟನೆ ಪದಾಧಿಕಾರಿಗಳು, ಪ್ರಾಥಮಿಕ, ಪ್ರೌಢ ಮತ್ತು ಪದವಿ ಮಹಾವಿದ್ಯಾಲಯದ ಉಪನ್ಯಾಸಕರು ಹಾಜರಿದ್ದರು.



■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಬುಧವಾರ ಶಿರಹಟ್ಟಿಯಲ್ಲಿ ಕರ್ನಾಟಕ ರಾಜ್ಯ ಭೂ ಸಂಪತ್ತು ಸಂರಕ್ಷಣಾ ಸಮಿತಿ ತಾಲೂಕಾ ಘಟಕದ ವತಿಯಿಂದ ಪತ್ರಿಕಾಗೋಷ್ಠಿ ನಡೆಸಲು ಸೂಕ್ತವಾದ ಸ್ಥಳವಿಲ್ಲದ್ದರಿಂದ ಪಟ್ಟಣದ ಮುಖ್ಯ ಸ್ಥಳದಲ್ಲಿ ಪತ್ರಿಕಾ ಭವನ ನಿರ್ಮಿಸಲು ಸೂಕ್ತ ನಿವೇಶನ ನೀಡಬೇಕೆಂದು ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕಾಧ್ಯಕ್ಷ ಮಾಬುಸಾಬ ಲಕ್ಷ್ಮೇಶ್ವರ, ಆನಂದ ಕೋಳಿ ಮುಂತಾದವರು ಉಪಸ್ಥಿತರಿದ್ದರು.

# ಚಿರತೆ ಸೆರೆಗೆ ಕಾರ್ಯಾಚರಣೆ

▸▸ ಮೊದಲನೇ ಪುಟದಿಂದ

ಜೀಗೇರಿ ಗ್ರಾಮದ ಯಲ್ಲಪ್ಪ ಕಾಡಾದ ಎಂಬುವರರ ಜಮೀನಿನಲ್ಲಿ ಶನಿವಾರ ಅರಣ್ಯ ಇಲಾಖೆಯಿಂದ ಒಂದು ಬೋನು ಇಡುವುದರೊಂದಿಗೆ ಗಸ್ತು ಕಾರ್ಯವನ್ನು ನಡೆಸಲಾಗಿತ್ತು. ಆದರೆ ಬುಧವಾರ ಬೆಳಿಗ್ಗೆ ಬೋನು ಇಟ್ಟಿದ್ದ ಸ್ಥಳದಿಂದ ಅರ್ಧ ಕಿಮಿ ದೂರದಲ್ಲಿನ ಬಾಳೆತೋಟದಲ್ಲಿ ಕೆಲಸ ಮಾಡುತ್ತಿದ್ದ ಯುವಕನ ಮೇಲೆ ಚಿರತೆ ದಾಳಿ ನಡೆಸಿದ್ದು, ಗಾಯಾಳುವಿಗೆ ವೈದ್ಯಾಧಿಕಾರಿಗಳು ಚಿಕಿತ್ಸೆ ನೀಡಿದ ಬಳಿಕ ಗಾಯಾಳುವನ್ನು ಜಿಲ್ಲಾಸ್ಪತ್ರೆಗೆ ಕಳುಹಿಸಿದ್ದಾರೆ.

ಯುವಕನ ಮೇಲೆ ಚಿರತೆ ದಾಳಿ ಮಾಡಿದ ಘಟನೆಯ ಮಾಹಿತಿ ಹಿನ್ನೆಲೆಯಲ್ಲಿ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದ ತಾಲೂಕಾ ಉಪವಲಯ ಅರಣ್ಯ ಅಧಿಕಾರಿ ಪ್ರವೀಣಕುಮಾರ ಸಾಸಿವಿಹಳ್ಳಿ, ಗಾಯಾಳುವಿನ ಆರೋಗ್ಯ ವಿಚಾರಿಸಿ, ಮೇಲಾಧಿಕಾರಿಗಳಿಗೆ ಘಟನೆಯ ಕುರಿತು ಸಮಗ್ರ ಮಾಹಿತಿ ನೀಡಿದರು.

ಈ ವೇಳೆ ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ, ಆಸ್ಪತ್ರೆಯ ವೈದ್ಯಾಧಿಕಾರಿಯೊಂದಿಗೆ ಚರ್ಚಿಸಿ, ಜೀಗೇರಿ ಗ್ರಾಮದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಕೈಗೊಂಡಿರುವ ಕ್ರಮಗಳು ಮತ್ತು ಘಟನೆ ಬಗ್ಗೆ ಮಾಹಿತಿ ಪಡೆದರು. ನಂತರ ಅರಣ್ಯ ಇಲಾಖೆಯ ಮೇಲಾಧಿಕಾರಿಗಳಿಗೆ ಜೀಗೇರಿ ಗ್ರಾಮಕ್ಕೆ 2 ಬೋನುಗಳನ್ನು ಕಳುಹಿಸಲು ತಿಳಿಸಿ, ಚಿರತೆ ಶೋಧಕ್ಕೆ ತಾಲೂಕಾಡಳಿತದಿಂದ ಪೋಲೀಸ್ ಸಿಬ್ಬಂದಿ ಸೇರಿ ಅಗತ್ಯ ಸಹಕಾರ ನೀಡಲಾಗುವುದು ಎಂದರು.

### ಸಿದ್ಧರಾಮೇಶ್ವರ ಜಯಂತಿ ನಿಮಿತ್ತ ಭಾವಚಿತ್ರ ಮೆರವಣಿಗೆ

# ಕರ್ಮ ಅರಿತು ನಡೆದರೆ ಜೀವನ ಸಾರ್ಥಕ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ದಾರ್ಶನಿಕರು ಹಾಗೂ ಶರಣರ ವಿಚಾರಗಳು ಮತ್ತು ಸಾಧನೆಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡು, ಅದನ್ನು ಯುವ ಸಮೂಹಕ್ಕೆ ತಿಳಿಸಿಕೊಡುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಭೋವಿ ಸಮಾಜದ ಮುಖಂಡ ಷಣ್ಮುಖಪ್ಪ ನಿಡಗುಂದಿ ಹೇಳಿದರು.



ಸಿದ್ಧರಾಮೇಶ್ವರ ಜಯಂತಿ ನಿಮಿತ್ತ ಬುಧವಾರ ಪಟ್ಟಣದ ಹಿರೇದುರ್ಗಾದೇವಿ ದೇವಸ್ಥಾನದಿಂದ ಆರಂಭವಾದ ಸಿದ್ಧರಾಮೇಶ್ವರ ಭಾವಚಿತ್ರ ಮೆರವಣಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಶರಣರ ವಚನಗಳಿಂದ ನಮ್ಮಲ್ಲಾಗುವ ಬದಲಾವಣೆಯೇ ಶರಣ ಪೂಜೆಯಾಗಿದೆ. 12ನೇ ಶತಮಾನದಲ್ಲಿಯೇ ಕೆರೆ, ಕಾಲುವೆ ಹಾಗೂ ದೇವಸ್ಥಾನ ಕಟ್ಟಿಸುವ ಮೂಲಕ ಕರ್ಮ ಹಾಗೂ ಕಾಯಕದ ಮಹತ್ವ ಸಾರಿದ ಮಹಾಶರಣ ಸಿದ್ಧರಾಮೇಶ್ವರರನ್ನು 900 ವರ್ಷಗಳ ಬಳಿಕ ನೆನೆಯುತ್ತಿರುವ ನಾವು, ಕರ್ಮ ಅರಿತು ಜೀವನ ನಡೆಸಿದರೆ ಜೀವನ ಸಾರ್ಥಕವಾಗಲಿದೆ ಎಂದರು.

ಸಾಹಿತಿ ಎಫ್.ಎಸ್. ಕರಿದುಗರಣ್ಣವರ, ಮುಖಂಡ ಶರಣಪ್ಪ ಚಳಗೇರಿ ಮಾತನಾಡಿ, ಶಿವಯೋಗಿ ಸಿದ್ಧರಾಮೇಶ್ವರರು 68 ಸಾವಿರ ವಚನಗಳನ್ನು ರಚಿಸಿ ಹಾಡಿದ್ದಾರೆ. ಆದರೆ 1679 ವಚನಗಳು ಮಾತ್ರ ಲಭ್ಯವಾಗಿವೆ. ಬಸವಣ್ಣ ಹಾಗೂ ಸಿದ್ಧರಾಮೇಶ್ವರ ಶಿವಯೋಗಿಗಳು ಶ್ರೇಷ್ಠ ವಚನಕಾರರಾಗಿದ್ದಾರೆ ಎಂದರು.

ಸಮಾಜದ ಅಧ್ಯಕ್ಷ ಮುದಿಯಪ್ಪ ಮುಧೋಳ, ಮುಖಂಡ ಬಸವರಾಜ ಬಂಕದ ಮಾತನಾಡಿ, ಶರಣರ ತತ್ವಾದರ್ಶಗಳನ್ನು ಜೀವನದಲ್ಲಿ ಅಳಡಿವಸಿಕೊಂಡಾಗ ಬದಲಾವಣೆ ಸಾಧ್ಯ. ಸಿದ್ಧರಾಮೇಶ್ವರರು ಪವಾಡ ಪುರಷರಾಗಿದ್ದರು. ಡಂಭಾಚಾರದ ಪವಾಡಗಳನ್ನು ಸೃಷ್ಟಿಸಲಿಲ್ಲ, ಬದಲಾಗಿ ಸಮಾಜವನ್ನು ಕಾಯಕದತ್ತ ಸಾಗಿಸಲು ದಾರಿದೀಪ ಹಚ್ಚಿಕೊಟ್ಟು, ಸಕಲ ಜೀವಾತ್ಮಗಳಿಗೆ ಒಳಿತು ಬಯಸಿದ್ದಾರೆ ಎಂದರು. ಈ ವೇಳೆ ಸಮಾಜದ ಮುಖಂಡರಾದ ಯಲಪ್ಪ ಬಂಕದ, ದುರಗಪ್ಪ ಮುಧೋಳ, ಮಲ್ಲಪ್ಪ ಕಲ್ಲೊಡ್ಡರ, ಮೂಕಪ್ಪ ಗುಡೂರು, ಷಣ್ಮುಖಪ್ಪ ಚಿಲ್‌ಝರಿ, ವೆಂಕಟೇಶ ಬಂಕದ, ಹನಮಂತ ಗೌಡರ, ರಾಮಣ್ಣ ನಿಡಗುಂದಿ, ಕಳಕಪ್ಪ ಮನ್ನೇರಾಳ, ತಿರುಪತಿ ಕಲ್ಲೊಡ್ಡರ, ಗಿಡ್ಡಪ್ಪ ಪೂಜಾರ, ಮುತ್ತಪ್ಪ ಲಕ್ಕಲಕಟ್ಟಿ ಸೇರಿ ಇತರರು ಇದ್ದರು.

> ಪಟ್ಟಣದ ಹಿರೇ ದುರ್ಗಾದೇವಿ ದೇವಸ್ಥಾನದ ಮುಂಭಾಗದ ಆರಂಭವಾದ ಮೆರವಣಿಗೆಯು ಚನ್ನಮ್ಮ ವೃತ್ತ, ಸಿದ್ಧರಾಮೇಶ್ವರ ವೃತ್ತ, ಪುರಸಭೆ, ಮೈಸೂರು ಮಠ, ಬಸವೇಶ್ವರ ವೃತ್ತ, ಅಗಸಿಬಾಗಿಲು, ದುರ್ಗಾ ವೃತ್ತ, ಜೋಡು ರಸ್ತೆ ಮಾರ್ಗವಾಗಿ ಕಾಲಕಾಲೇಶ್ವರ ವೃತ್ತದಿಂದ ಮರಳಿ ಹಿರೇದುರ್ಗಾದೇವಿ ದೇವಸ್ಥಾನ ತಲುಪಿತು.

# ಪೋಷಕರ ನಿರೀಕ್ಷೆ ಹುಸಿಗೊಳಿಸದಿರಿ



■ ವಿಜಯಸಾಕ್ಷಿ ಸುದ್ದಿ, ಗದಗ

ಇತ್ತೀಚಿನ ದಿನಗಳಲ್ಲಿ ಎಲ್ಲವನ್ನೂ ಹಗುರವಾಗಿ ತೆಗೆದುಕೊಳ್ಳುವ ಮನೋಭಾವ ಹೆಚ್ಚುತ್ತಿದೆ. ಆದರೆ ಇಂಥ ಬೇಜವಾಬ್ದಾರಿಗಳನ್ನು ತೊ-ರೆದು ಇದೇ ನಮ್ಮ ಕೊನೆಯ ದಿನ ಎಂದು ಕಾರ್ಯಪ್ರವೃತ್ತರಾದಾಗ ಮಾತ್ರ ಗುರಿ ತಲುಪಲು ಸಾಧ್ಯ ಎಂದು ಎಲುಬು-ಕೀಲು ತಜ್ಞ ಡಾ. ಪ್ರಕಾಶ ಸಂಕನೂರ ನುಡಿದರು.

ನಗರದ ತೋಂಟದಾರ್ಯ ವಿದ್ಯಾಪೀಠದ ತೋಂಟದ ಸಿದ್ಧೇಶ್ವರ ವಿಜ್ಞಾನ, ವಾಣಿಜ್ಯ ಹಾಗೂ ಕಲಾ ಮಹಾವಿದ್ಯಾಲಯದಲ್ಲಿ ಜರುಗಿದ ವಾರ್ಷಿಕೋತ್ಸವ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಪೋಷಕರು ವಿದ್ಯಾರ್ಥಿಗಳ ಮೇಲೆ ಇಟ್ಟಿರುವ ನೀರಿಕ್ಷೆಗಳನ್ನು ಹುಸಿಗೊಳಿಸದೇ ಅವುಗಳನ್ನು ಈಡೇರಿಸಿ ಎಂದರಲ್ಲದೆ, ಲಿಂ. ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ನೀಡುತ್ತಿದ್ದ ಬಕಪಕ್ಷಿಯ ಉದಾಹರಣೆ ಉಲ್ಲೇಖಿಸಿ, ದೊಡ್ಡ ಗುರಿ ಹೊಂದಿ ಅದನ್ನು ತದೇಕಚಿತ್ತದಿಂದ ತಲುಪುವಂತೆ ಕಿವಿಮಾತು ಹೇಳಿದರು.

ಜಿ.ಪಂ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ ಕಾರ್ಯಕ್ರಮ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ವಿದ್ಯಾಪೀಠದ ಕಾರ್ಯದರ್ಶಿ ಎಸ್. ಪಟ್ಟಣಶೆಟ್ಟರ ವಹಿಸಿದ್ದರು. ಅತಿಥಿಗಳಾಗಿ ವೈ.ಎಚ್. ತಕ್ಕಲಕೋಟಿ, ಎಸ್.ಜಿ. ಕೊಲ್ಮಿ ಪಾಲ್ಗೊಂಡಿದ್ದರು. ಬಾಳಮ್ಮ ಆದಮ್ಮನವರ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಸಂಸ್ಥೆಯ ಕಾರ್ಯದರ್ಶಿ ಕೊಟ್ರೇಶ ಮೆಣಸಿನಕಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ವೈ.ಎಸ್. ಮತ್ತೂರ ಸ್ವಾಗತಿಸಿದರು. ಎನ್.ವಿ. ಕಡಗದ ನಿರೂಪಿಸಿದರು. ಶಿವಪ್ಪ ಎಂ. ವಂದಿಸಿದರು. ಸುಮಾ ಗುರಿಕಾರ ವಚನ ನೃತ್ಯಗೈದರು. ವೇದಿಕೆ ಮೇಲೆ ಹಿರಿಯರಾದ ಎಚ್.ಎಸ್. ಕಿಂದ್ರಿ, ವಿದ್ಯಾರ್ಥಿ ಪ್ರತಿನಿಧಿ ಚೇತನ ಉಪಸ್ಥಿತರಿದ್ದರು.

# 'ನವರಸ ಸಂಗಮ' ಸಾಂಸ್ಕೃತಿಕ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಅನ್ನದಾನೇಶ್ವರ ವಿದ್ಯಾ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಜೀವನದಲ್ಲಿ ಉತ್ತಮ ಬದುಕನ್ನು ಕಟ್ಟಿಕೊಂಡಿದ್ದಾರೆ. ನೀವು ಕೂಡ ಪ್ರತಿಭಾ ಸಂಪನ್ನರಾಗಿ ಎಂದು ಹಾಲಕೆರೆ ಸಂಸ್ಥಾನ ಮಠದ ಪೀಠಾಧಿಪತಿ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿಯವರು ಹೇಳಿದರು.



ಅವರು ಪಟ್ಟಣದ ಎಸ್.ಎ.ವಿ.ವಿ.ಪಿ ಸಮಿತಿಯ ಬಸವೇಶ್ವರ ಸಿಬಿಎಸ್‌ಇ ಶಾಲೆಯಲ್ಲಿ ಹಮ್ಮಿಕೊಂಡಿದ್ದ 11ನೇ ವರ್ಷದ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ನವರಸ ಸಂಗಮ ಸಾಂಸ್ಕೃತಿಕ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಎಸ್.ಎ.ವಿ.ವಿ.ಪಿ ಸಮಿತಿಯ ಪ್ರಧಾನ ಕಾರ್ಯದರ್ಶಿ, ಬಸವೇಶ್ವರ ಸಿಬಿಎಸ್‌ಇ ಶಾಲೆಯ ಚೇರಮನ್ ರವೀಂದ್ರನಾಥ ದೊಡ್ಡಮೇಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶಾಲೆಯಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದರು.

ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿ.ಪಿ. ಕುಲಕರ್ಣಿಯವರನ್ನು ಸನ್ಮಾನಿಸಲಾಯಿತು. ಸದಸ್ಯ ಡಾ. ಜಿ.ಕೆ. ಕಾಳೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಎಸ್.ಎ.ವಿ.ವಿ.ಪಿ ಸಮಿತಿಯ ಆಡಳಿತಾಧಿಕಾರಿ ಎನ್.ಆರ್. ಗೌಡರ, ಸದಸ್ಯರಾದ ವಿ.ಬಿ. ಸೋಮನಕಟ್ಟಿಮಠ, ಸದಾಶಿವ ಕರಡಿ, ಕೆವಿಜಿಬಿ ಉಚಿತ ಪ್ರಸಾದ ನಿಲಯದ ಚೇರಮನ್ ಎಂ.ಬಿ. ಮೆಣಸಗಿ, ಶಾಲೆಯ ಪ್ರಾಚಾರ್ಯ ಬಿ.ಎಚ್. ಬಂಡಿಹಾಳ ಉಪಸ್ಥಿತರಿದ್ದರು.

ಶಿಕ್ಷಕರಾದ ರಮೇಶ್ ಮಾಳೋತ್ತರ್, ಜಗದೀಶ್ ಹಾಳಕೆರೆ, ವೀರೇಶ್ ಕಿನ್ನಾಳಮಠ, ಅಂಗಸಂಸ್ಥೆಯ ಮುಖ್ಯಸ್ಥರು ಸೇರಿದಂತೆ ಎಲ್ಲ ಶಿಕ್ಷಕರು, ಸಿಬ್ಬಂದಿ ಬಳಗ, ಮಕ್ಕಳು ಹಾಗೂ ಪಾಲಕರು ಹಾಜರಿದ್ದರು. ಶಿಕ್ಷಕ ಬಸವರಾಜ ಕುಂಬಾರ ಸ್ವಾಗತಿಸಿದರು. ಬಿ.ವಾಯ್. ಮಡಿವಾಳರ ಅತಿಥಿಗಳನ್ನು ಪರಿಚಯಿಸಿದರು. ಕುಮಾರ ಹರ್ಲಾಪೂರ, ಅನುರಾಧ ಕರಡಿ ನಿರೂಪಿಸಿದರು. ಶರಣು ಬಳಗೋಡ ವಂದಿಸಿದರು.

# ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಿ



■ ವಿಜಯಸಾಕ್ಷಿ ಸುದ್ದಿ, ರೋಣ

ಸಾರ್ವಜನಿಕರು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಮತ್ತಷ್ಟು ಗಟ್ಟಿಗೊಳ್ಳಬೇಕು ಎಂದು ಹೊಳೆಆಲೂರ ಪಟ್ಟಣದ ಅಂಜುಮನ್ ಇಸ್ಲಾಂ ಕಮಿಟಿ ಅಧ್ಯಕ್ಷ ಪಕ್ರುಸಾಬ ಚಿಕ್ಕಮಣ್ಣೂರ ಹೇಳಿದರು.

ನೂತನವಾಗಿ ಠಾಣೆಗೆ ಆಗಮಿಸಿದ ಎಎಸ್‌ಐ ಬಸವರಾಜ ಹೊರಕೇರಿಯವರನ್ನು ಹೊಳೆಆಲೂರ ಗ್ರಾಮದಲ್ಲಿ ಸನ್ಮಾನಿಸಿ ಅವರು ಮಾತನಾಡಿದರು.

ಭವ್ಯ ಭಾರತ ದೇಶ ಅನೇಕ ಭಾಷೆ, ಧರ್ಮಗಳನ್ನು ಒಳಗೊಂಡಿದೆಯಲ್ಲದೆ ಜಗತ್ತಿಗೇ ಮಾದರಿಯಾಗಿದೆ. ದೇಶದ ಪ್ರಜೆಗಳಾದ ನಾವುಗಳು ಏಕತೆ ಹಾಗೂ ಸಹೋದರತೆಯಿಂದ ಬಾಳುವ ಮೂಲಕ ಪ್ರಜಾಪ್ರಭುತ್ವವನ್ನು ಮತ್ತಷ್ಟು ಗಟ್ಟಿಗೊಳಿಸಬೇಕು ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಎಎಸ್‌ಐ ಬಸವರಾಜ ಹೊರಕೇರಿ, ಭಾರತ ಮೊದಲಿನಿಂದಲೂ ಏಕತೆಯನ್ನು ಪ್ರತಿಪಾದಿಸುವ ಮೂಲಕ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ದೇಶವಾಗಿ ಹೊರಹೊಮ್ಮಿದೆ. ದೇಶದ ಬಲವರ್ಧನೆ ಹಾಗೂ ಅಭಿವೃದ್ಧಿಗೆ ನಾಗರಿಕ ಸಮುದಾಯದ ಕೊಡುಗೆ ಅಪಾರವಾಗಿದೆ. ಪಟ್ಟಣದಲ್ಲಿ ಕಾನೂನು ಬಾಹಿರ ಚಟುವಟಿಕೆಗಳಿಗೆ ಆಸ್ಪದ ನೀಡುವುದಿಲ್ಲ. ಅಲ್ಲದೆ ಗ್ರಾಮಸ್ಥರೂ ಅಪರಾಧ ಚಟುವಟಿಕೆಗಳನ್ನು ನಿಯಂತ್ರಿಸಲು ಪೋಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕು ಎಂದರು.

ಈ ಸಂದರ್ಭದಲ್ಲಿ ಅಲ್ಲಾಭಕ್ಷ ಮನ್ನಾಪೂರ, ಮೈನುದ್ದಿನ್ ನದಾಫ್, ಯಮನೂರ ನದಾಫ್, ದಾದಾಪೀರ ಮುಲ್ಲಾ, ರವಿ ಬಳಿಗೇರ, ವಾಸು ಪತ್ತಾರ, ಭಾಷೇಸಾಬ ಖಾಜಿ ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.

# ಸ್ಪರ್ಶ ಕುಷ್ಠರೋಗ ಜಾಗೃತಿ ಅಭಿಯಾನ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಇಲ್ಲಿನ ಜಂತ್ಲಿ ಶಿರೂರು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಶ ಕುಷ್ಠರೋಗ ಜಾಗೃತಿ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.



ಜಂತ್ಲಿ ಶಿರೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಆನಂದ ಕಗ್ಗೋಡ ಮಾತನಾಡಿ, ಜ.30ರಿಂದ ಫೆ.13ರವರೆಗೆ ಸ್ಪರ್ಶ ಕುಷ್ಠರೋಗ ಜಾಗೃತಿ ಆಂದೋಲನ ನಡೆಯುತ್ತಿದೆ. ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿ ಕುಷ್ಠರೋಗ ನಿರ್ಮೂಲನೆ ಮಾಡುವ ಗುರಿ ಹೊಂದಲಾಗಿದೆ. ಕುಷ್ಠರೋಗದಿಂದ ಆಗುವ ಅಂಗವಿಲಕತೆ ಕಡಿಮೆ ಮಾಡುವುದು, ಇದಕ್ಕೆ ತುತ್ತಾದ ಜನರಿಗೆ ವೈದ್ಯಕೀಯ ವ್ಯವಸ್ಥೆ ಕಲ್ಪಿಸುವುದು ಸಹ ಮುಖ್ಯವಾಗಿದೆ.


ಕುಷ್ಠರೋಗ ಕುರಿತು ಸಮಾಜದಲ್ಲಿರುವ ಕೀಳರಿಮೆ ಹೋಗಲಾಡಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಕಾರ್ಯಕ್ರಮ ರೂಪಿಸಬೇಕಾಗಿದೆ. ಈ ಬಾರಿ ಕುಷ್ಠರೋಗ ಜಾಗೃತಿ ಆಂದೋಲನದ ಘೋಷವಾಕ್ಯ 'ಕಳಂಕವನ್ನು ಕೊನೆಗೊಳಿಸಿ ಘನತೆಯನ್ನು ಎತ್ತಿಹಿಡಿಯೋಣ' ಎಂಬುದಾಗಿದೆ. ಈ ಆಂದೋಲನ ಎಲ್ಲ ಸಮುದಾಯಗಳನ್ನು ಒಗ್ಗೂಡಿಸಿ ಕುಷ್ಠರೋಗದ ಬಗ್ಗೆ ಅರಿವು ಮೂಡಿಸಿ, ರೋಗವನ್ನು ಶೀಘ್ರ ಪತ್ತೆ ಹಚ್ಚುವ ಮೂಲಕ ಅಂಗವಿಕಲತೆ ಕಡಿಮೆ ಮಾಡುವುದು ಪ್ರಮುಖವಾಗಿದೆ ಎಂದರು.

ಗ್ರಾ.ಪಂ ಉಪಾಧ್ಯಕ್ಷ ರವಿ ದೊಡ್ಡಮನಿ ಮಾತನಾಡಿ, ಕುಷ್ಠರೋಗವನ್ನು ಹೋಗಲಾಡಿಸಲು ಅರಿವು ಮೂಡಿಸುವ ಕೆಲಸವನ್ನು ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಮಾಡುತ್ತಿದ್ದಾರೆ. ಇನ್ನು ಮುಂದೆ ನಾವೂ ಕೂಡ ಗಾಂಧೀಜಿಯವರ ಕನಸನ್ನು ನನಸು ಮಾಡಲು ಪಣ ತೊಡೋಣ ಎಂದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ ಸದಸ್ಯರು, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮಲ್ಲಿಕಾರ್ಜುನ ಕಲಕಂಬಿ, ಗ್ರಾ.ಪಂ ಕಾರ್ಯದರ್ಶಿ ಎಸ್.ಆರ್. ವೀರೇಶಣ್ಣ, ಆರೋಗ್ಯ ನಿರೀಕ್ಷಣಾಧಿಕಾರಿ ಶಿವಕುಮಾರ ಗುರಿಕಾರ, ಆಶಾ ಕಾರ್ಯಕರ್ತೆರಾದ ಸುಮಂಗಲಾ ಡಂಬಳ, ವಿಜಯಲಕ್ಷ್ಮೀ ಪಾಟ್ಲೀ ಹಾಗೂ ಅಕ್ಷತಾ ಹಡಪದ ಪಾಲ್ಗೊಂಡಿದ್ದರು.

## ನಿಧನ ವಾರ್ತೆ

**ಜಲ್ಲಾಲಪ್ಪ ಮೇಚಪ್ಪ ಕಟ್ಟಿಮನಿ**



ಗದಗ: ಸಮಿಪದ ತಿಮ್ಮಾಪೂರ ಗ್ರಾಮದ ನಿವಾಸಿ ಜಲ್ಲಾಲಪ್ಪ ಮೇಚಪ್ಪ ಕಟ್ಟಿಮನಿ(71) ಬುಧವಾರ ಮಧ್ಯಾಹ್ನ 3-30ಕ್ಕೆ ದೈವಾಧೀನರಾದರು. ಮೃತರು ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.ಮೃತರ ಅಂತಿಮ ಯಾತ್ರೆ ಗುರುವಾರ ಮಧ್ಯಾಹ್ನ 2.30ಕ್ಕೆ ತಿಮ್ಮಾಪೂರ ಗ್ರಾಮದಲ್ಲಿ ನೆರವೇರಲಿದೆ.

## ಯುವ ಕಾಂಗ್ರೆಸ್‌ನಿಂದ ದಿ. ಕೆ.ಎಚ್. ಪಾಟೀಲ ಪುಣ್ಯತಿಥಿ ಅಂಗವಾಗಿ ಮಾಲಾರ್ಪಣೆ ಕಾರ್ಯಕ್ರಮ ನಾಳೆ

■ವಿಜಯಸಾಕ್ಷಿ ಸುದ್ದಿ, ಗದಗ

ಸಹಕಾರಿ ರಂಗದ ಭೀಷ್ಮ ದಿ. ಕೆ.ಎಚ್. ಪಾಟೀಲರ ಪುಣ್ಯತಿಥಿ ನಿಮಿತ್ತ ಫೆ.9ರ ಬೆಳಿಗ್ಗೆ 10 ಗಂಟೆಗೆ ನಗರದ ದಿ. ಕೆ.ಎಚ್. ಪಾಟೀಲ ವೃತ್ತದ ಬಳಿ ಗದಗ ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ಮಾಲಾರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾಂಗ್ರೆಸ್ ಪಕ್ಷದ ಮಾಜಿ–ಹಾಲಿ ಶಾಸಕರು, ಪಕ್ಷದ ಜಿಲ್ಲಾ ಪದಾಧಿಕಾರಿಗಳು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು–ಪದಾಧಿಕಾರಿಗಳು, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ, ಗ್ರಾಮ ಪಂಚಾಯತ, ಎಪಿಎಂಸಿ ಪಕ್ಷದ ಅಧ್ಯಕ್ಷರು–ಸದಸ್ಯರು, ನಗರಸಭೆ, ಪಟ್ಟಣ ಪಂಚಾಯಿತಿ, ಪುರಸಭೆ ಅಧ್ಯಕ್ಷರು– ಸದಸ್ಯರು, ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್, ಎಸ್ಸಿ/ಎಸ್ಟಿ, ಅಲ್ಪಸಂಖ್ಯಾತರ, ವಿದ್ಯಾರ್ಥಿ ಕಾಂಗ್ರೆಸ್, ಕಾಂಗ್ರೆಸ್ ಸೇವಾದಳ, ಹಿಂದುಳಿದ ವರ್ಗ, ಸಾಮಾಜಿಕ ಜಾಲತಾಣ, ರಾಜೀವಗಾಂಧಿ ಪಂಚಾಯತ ಸಂಘಟನೆ, ಮಾಜಿ ಸೈನಿಕರ ವಿಭಾಗ, ಮೀನುಗಾರ ವಿಭಾಗ, ಕಾರ್ಮಿಕರ ವಿಭಾಗ, ಐಎನ್‌ಟಿಯುಸಿ, ಕಾನೂನು ಮತ್ತು ಮಾನವ ಹಕ್ಕು ವಿಭಾಗ, ಕಿಸಾನ್ ಮತ್ತು ಖೇತ್ ಮಜದೂರ ವಿಭಾಗ, ಮಾಜಿ ಸೈನಿಕರ ವಿಭಾಗ, ವೈದ್ಯರ ವಿಭಾಗ, ವೃತ್ತಿಪರ ವಿಭಾಗ, ಪದವೀಧರ ಹಾಗೂ ಶಿಕ್ಷಕರ ವಿಭಾಗ, ನೀತಿ ಮತ್ತು ಸಂಶೋಧನೆ ತರಬೇತಿ ವಿಭಾಗ, ವಿಕಲಚೇತನರ ವಿಭಾಗ, ಲಿಗಲ್ ರೀಫಾರ್ಮ್ಸ್ ವಿಭಾಗ, ಐಟಿ–ಡಾಟಾ ವಿಭಾಗ, ಮಾಧ್ಯಮ ಮತ್ತು ಸಂಪರ್ಕ ಇಲಾಖೆ ವಿಭಾಗಗಳ ಅಧ್ಯಕ್ಷರು–ಸದಸ್ಯರು, ಪಕ್ಷದ ಅಭಿಮಾನಿಗಳು ಪಾಲ್ಗೊಳ್ಳಬೇಕೆಂದು ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಅಶೋಕ ಮಂದಾಲಿ ವಿನಂತಿಸಿದ್ದಾರೆ.

## ಹಾವೇರಿ ಲೋಕಸಭಾ ಕ್ಷೇತ್ರದ ಜೆಡಿಎಸ್ ಪಕ್ಷದಿಂದ ಚುನಾವಣಾ ಸಹ ಉಸ್ತುವಾರಿ

■ವಿಜಯಸಾಕ್ಷಿ ಸುದ್ದಿ, ಹಾವೇರಿ



ಹಾವೇರಿ ಲೋಕಸಭಾ ಕ್ಷೇತ್ರದ ಜೆಡಿಎಸ್ ಪಕ್ಷದಿಂದ ಚುನಾವಣಾ ಸಹ ಉಸ್ತುವಾರಿಯಾಗಿ ಶಿರಹಟ್ಟಿ ಮತಕ್ಷೇತ್ರದ ಜೆಡಿಎಸ್ ಪಕ್ಷದ ಅಧ್ಯಕ್ಷ, ಮಾಜಿ ಶಾಸಕ ದಿ. ಟಿ.ಬಿ. ಬಾಳಿಕಾಯಿ ಅವರ ಪುತ್ರ ಶಂಕ್ರಣ್ಣ ಬಾಳಿಕಾಯಿ ಅವರನ್ನು ಜೆಡಿಎಸ್ ಪಕ್ಷದ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ನೇಮಕ ಮಾಡಿ ಆದೇಶಿಸಿದ್ದಾರೆ.

### ತಾಲೂಕಾಡಳಿತದ ವತಿಯಿಂದ ಹಕ್ಕುಪತ್ರ ವಿತರಿಸುವ ಅಂತಿಮ ಕಾರ್ಯ

# ಲಂಬಾಣಿ ತಾಂಡಾಗಳೀಗ 'ಕಂದಾಯ ಗ್ರಾಮ'

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿ ಎಸ್‌ಸಿ ಮೀಸಲು ಮತಕ್ಷೇತ್ರವೆಂದು ಗುರುತಿಸಿಕೊಂಡಿದ್ದರೂ ಸಹ ಹಲವು ವರ್ಷಗಳಿಂದ ಲಂಬಾಣಿ ತಾಂಡಾಗಳು ಕಂದಾಯ ಗ್ರಾಮಗಳಾಗಿ ಗುರುತಿಸಿಕೊಳ್ಳದೇ ಇರುವುದರಿಂದ ಕೆಲವೊಂದು ಹಕ್ಕುಗಳನ್ನು ಪಡೆಯಲು ಸಾಧ್ಯವಾಗಿರಲಿಲ್ಲ. ಇತ್ತೀಚೆಗೆ ಸರಕಾರ ಶಿರಹಟ್ಟಿ ತಾಲೂಕಿನ ಹೊಸಳ್ಳಿ, ಸೇವಾನಗರ, ಗುಡ್ಡದಪುರ ಮತ್ತು ಶಿವಾಜಿನಗರ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಿದ್ದು ಇದೀಗ ತಾಲೂಕಾಡಳಿತದ ವತಿಯಿಂದ ಹಕ್ಕುಪತ್ರ ವಿತರಿಸುವ ಅಂತಿಮ ಕಾರ್ಯ ಪ್ರಗತಿಯಲ್ಲಿದೆ.

ಕಂದಾಯ ಗ್ರಾಮಗಳೆಂದು ಘೋಷಣೆಯಾದ ಬಳಿಕ ಅಲ್ಲಿ ವಾಸಿಸುವ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸುವ ಉದ್ದೇಶದಿಂದ ಜಿಲ್ಲಾಡಳಿತದ ನಿರ್ದೇಶನದ ಮೇರೆಗೆ ತಾಲೂಕಾಡಳಿತದ ವತಿಯಿಂದ ತಹಸೀಲ್ದಾರ

> ಈ ಕುರಿತು ಪ್ರತಿಕ್ರಿಯಿಸಿದ ಬಂಜಾರ ಸಮಾಜದ ಮುಖಂಡ ಜಾನು ಲಮಾಣಿ, ತಾಲೂಕಿನ ತಾಂಡಾಗಳು ಕಂದಾಯ ಗ್ರಾಮಗಳಾಗುವುದಕ್ಕೆ ಹಲವಾರು ಬಾರಿ ಸಂಬಂಧಿಸಿದ ಅಧಿಕಾರಿಗಳಿಗೆ ಒತ್ತಾಯಿಸಲಾಗಿತ್ತು. ಇದೀಗ ಹಕ್ಕುಪತ್ರ ವಿತರಿಸುತ್ತಿರುವುದು ಶ್ಲಾಘನೀಯ. ಬಾಕಿ ಉಳಿದವರಿಗೂ ಶೀಘ್ರದಲ್ಲಿಯೇ ನಿಯಮಾನುಸಾರ ಹಕ್ಕುಪತ್ರ ವಿತರಿಸಬೇಕೆಂದು ಒತ್ತಾಯಿಸಿದರು.



ಮತ್ತು ಸಿಬ್ಬಂದಿ ವರ್ಗ ತಾಂಡಾಗಳಿಗೆ ಭೇಟಿ ನೀಡಿ ಅಲ್ಲಿ ವಾಸಿಸುವ ಕುಟುಂಬಗಳಿಂದ ಸಂಪೂರ್ಣ ಮಾಹಿತಿಯನ್ನು ಕ್ರೋಢೀಕರಿಸಿ, ಅವರ ನಿವಾಸದ ಸಂಪೂರ್ಣ ಅಳತೆಯನ್ನು ಸಹ ಪಡೆದುಕೊಂಡು ಅವರಿಂದ ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲನೆ ನಡೆಸಿದರಲ್ಲದೆ, ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅವುಗಳನ್ನು ಸಹ ಸ್ಥಳೀಯ ಮಟ್ಟದಲ್ಲಿಯೇ ಬಗೆಹರಿಸಿ ಸರಕಾರದಿಂದ ಕೊಡಮಾಡುವ ಹಕ್ಕುಪತ್ರ ವಿತರಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ.

ಹೊಸಳ್ಳಿ ಗ್ರಾಮನದಲ್ಲಿ ಒಟ್ಟು 185 ಅರ್ಜಿಗಳು ಸ್ವೀಕೃತವಾಗಿದ್ದು, ಅವುಗಳಲ್ಲಿ 129 ಹಕ್ಕುಪತ್ರ ವಿತರಿಸಲಾಗಿದೆ. ಇನ್ನೂ 56 ಹಕ್ಕುಪತ್ರ ವಿತರಿಸುವುದು ಬಾಕಿ ಉಳಿದಿದೆ. ಸೇವಾನಗರ ಗ್ರಾಮದಲ್ಲಿ 163 ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲನೆ ನಡೆಸಿಲಾಗಿದ್ದು, ಇವರೆಲ್ಲರಿಗೂ ಸದ್ಯದಲ್ಲಿಯೇ ಹಕ್ಕುಪತ್ರ ವಿತರಣೆಯಾಗಬೇಕಿದೆ. ಗುಡ್ಡದಪುರ ಗ್ರಾಮದಲ್ಲಿ 102 ಅರ್ಜಿಗಳು ಸ್ವೀಕೃತವಾಗಿದ್ದು, ಅದರಲ್ಲಿ 60 ಹಕ್ಕುಪತ್ರ ವಿತರಣೆಯಾಗಿದೆ ಮತ್ತು ಇನ್ನೂ 42 ಹಕ್ಕುಪತ್ರ ವಿತರಣೆಯಾಗಬೇಕಿದೆ. ಶಿವಾಜಿನಗರ ತಾಂಡಾದಲ್ಲಿ ಅಳತೆ ಕಾರ್ಯ ಪ್ರಗತಿಯಲ್ಲಿದ್ದು, ಪೂರ್ಣಗೊಂಡ ಬಳಿಕ ಅರ್ಜಿಗಳನ್ನು ಸ್ವೀಕರಿಸಲಾಗುವುದು ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ.

> ಸರಕಾರದ ನಿರ್ದೇಶನದಂತೆ ಕಂದಾಯ ಗ್ರಾಮಗಳಾಗಿ ಘೋಷಣೆಯಾದ ಗ್ರಾಮಗಳಿಗೆ ತೆರಳಿ ಅಲ್ಲಿ ವಾಸಿಸುವ ಜನತೆಯ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲನೆ ನಡೆಸಲಾಗಿದೆ. ಇದರಲ್ಲಿ ಈಗಾಗಲೇ ಕೆಲವು ಹಕ್ಕುಪತ್ರ ವಿತರಿಸಲಾಗಿದೆ. ಬಾಕಿ ಉಳಿದವರಿಗೂ ಸಹ ಶೀಘ್ರದಲ್ಲಿಯೇ ಹಕ್ಕುಪತ್ರ ವಿತರಿಸಲಾಗುವುದು. ಚನ್ನಪಟ್ಟಣ ಗ್ರಾಮವನ್ನು ಕಂದಾಯ ಗ್ರಾಮವನ್ನಾಗಿಸುವುದಕ್ಕೆ ಪ್ರಸ್ತಾವನೆ ಸಿದ್ಧಪಡಿಸಲಾಗುತ್ತಿದೆ.
>
> – ಅನಿಲ ಬಡಿಗೇರ.
> ತಹಸೀಲ್ದಾರರು.

ಹಲವು ದಶಕಗಳಿಂದಲೂ ಶಿರಹಟ್ಟಿ ತಾಲೂಕಿನ ಮಾಗಡಿ ಗ್ರಾ.ಪಂ ವ್ಯಾಪ್ತಿಯ ಚನ್ನಪಟ್ಟಣ ಗ್ರಾಮವೂ ಕಂದಾಯ ಗ್ರಾಮವಾಗಬೇಕೆಂದು ಅಲ್ಲಿಯ ಗ್ರಾಮಸ್ಥರು ಹಲವು ದಶಕಗಳಿಂದಲೂ ಮನವಿ ಸಲ್ಲಿಸುತ್ತಲೇ ಬಂದಿದ್ದಾರೆ.

ಚುನಾವಣಾ ಬಹಿಷ್ಕಾರದಂತಹ ಪ್ರತಿಭಟನೆಗಳನ್ನು ಸಹ ಮಾಡಿದ್ದು, ಅವರಿಗೆ ಇಲ್ಲಿಯವರೆಗೂ ಕಂದಾಯ ಗ್ರಾಮಭಾಗ್ಯ ದೊರೆತಿಲ್ಲ. ಈ ಗ್ರಾಮಕ್ಕೂ ಸಹ ಕಂದಾಯ ಗ್ರಾಮದ ಎಲ್ಲ ಸೌಲಭ್ಯಗಳು ಯಾವಾಗ ದೊರೆಯುತ್ತವೆಯೋ ಎಂದು ಗ್ರಾಮಸ್ಥರು ಎದುರುನೋಡುತ್ತಿದ್ದಾರೆ.

## 'ಕೂಸಿನ ಮನೆ' ಆರೈಕೆದಾರರ ತರಬೇತಿ ಕಾರ್ಯಕ್ರಮ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಸರ್ಕಾರ ಗ್ರಾಮೀಣ ಪ್ರದೇಶದ 6 ತಿಂಗಳಿನಿಂದ 3 ವರ್ಷದೊಳಗಿನ ಮಕ್ಕಳ ಲಾಲನೆ, ಪಾಲನೆ, ಪೋಷಣೆ ಮತ್ತು ಆರೋಗ್ಯದ ಹಿತದೃಷ್ಟಿಯಿಂದ ಕೂಸಿನ ಮನೆಗಳನ್ನು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಒಂದರಂತೆ ಪ್ರಾರಂಭಿಸಿದೆ. ಅದರಂತೆ ಗದಗ ತಾಲೂಕಿನ 13 ಗ್ರಾ.ಪಂಗಳಲ್ಲಿ ಕೂಸಿನ ಮನೆಗಳನ್ನು ಪ್ರಾರಂಭಿಸಿದೆ. ನರೇಗಾ ಯೋಜನೆಯಡಿ ಕೂಲಿ ಕೆಲಸ ಮಾಡುವ ಕೂಲಿಕಾರರ ಮಕ್ಕಳಿಗೂ ಈ ಕೂಸಿನ ಮನೆಗಳು ಸಹಕಾರಿಯಾಗಲಿದೆ ಎಂದು ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಎಚ್. ಎಸ್. ಜನಗಿ ಹೇಳಿದರು.

ಗದಗ ತಾ.ಪಂ ಸಭಾಂಗಣದಲ್ಲಿ ಗ್ರಾಮ ಪಂಚಾಯಿತಿಯ ಕೂಸಿನ ಮನೆಯ ಆರೈಕೆದಾರರ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೂಸಿನ ಮನೆಯಲ್ಲಿ ಮಕ್ಕಳ ಆರೈಕೆಯ ಕುರಿತು ಕೂಸಿನ ಮನೆ ನಿರ್ವಹಣಾ ಸಮಿತಿಯ ಅಧ್ಯಕ್ಷರು, ಗ್ರಾ.ಪಂ ಅಧ್ಯಕ್ಷರು ಹಾಗೂ ಅಭಿವೃದ್ಧಿ ಅಧಿಕಾರಿಗಳು ಕೂಸಿನ ಮನೆಗೆ ಭೇಟಿ ನೀಡಿ, ಪರಿಶೀಲನೆ ಮಾಡಬೇಕು. ಆರೋಗ್ಯ ಕೇಂದ್ರಗಳ ವೈದ್ಯರು ಕೂಸಿನ ಮನೆಗೆ ಭೇಟಿ ನೀಡಿ ಮಕ್ಕಳ ಆರೋಗ್ಯ ತಪಾಸಣೆ ಮಾಡಬೇಕು ಎಂದರು.

ಕಾಂರ್ಯನಿರ್ವಾಹಕ ಅಧಿಕಾರಿಗಳಾದ ಎಚ್.ಎಸ್. ಜನಗಿ, ಗ್ರಾ.ಉ ಸಹಾಯಕ ನಿರ್ದೇಶಕ ಕುಮಾರ ಪೂಜಾರ, ಪಂ.ರಾ ಸಹಾಯಕ ನಿರ್ದೇಶಕರಾದ ಅಶ್ವಿನಿ ಕುರಡಗಿ, ಲಲಿತಾ ಅಳವಂಡಿ, ಕೂಸಿನ ಮನೆಯ ನೋಡಲ್ ಅಧಿಕಾರಿಗಳು, ಜಿ.ಪಂ ಐಇಸಿ ಸಂಯೋಜಕ ವಿ.ಎಸ್. ಸಜ್ಜನ, ತಾಲೂಕ ಐಇಸಿ ಸಂಯೋಜಕ ವಿರೇಶ ಪಟ್ಟಣಶೆಟ್ಟಿ ಹಾಗೂ ತಾ.ಪಂ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.

### ಜ. ತೋಂಟದಾರ್ಯ ಶಿಕ್ಷಣ ಸಂಸ್ಥೆಯ 46ನೇ ವಾರ್ಷಿಕ ಮಕ್ಕಳ ಪ್ರತಿಭಾ ಸಂಭ್ರಮ

# ಪದವಿಗಿಂತ ಕೌಶಲ್ಯಕ್ಕೇ ಹೆಚ್ಚು ಮೌಲ್ಯವಿದೆ

■ವಿಜಯಸಾಕ್ಷಿ ಸುದ್ದಿ, ಗದಗ

ಉತ್ತರ ಕರ್ನಾಟಕ ಭಾಗದಲ್ಲಿ ಈ ಸಂಸ್ಥೆ ಹೆಚ್ಚಾಗಿ ಪ್ರಭಾವ ಬೀರಿದೆ. ಈ ಸ್ಪರ್ಧಾತ್ಮಕ ಯುಗದಲ್ಲಿ ಪೋಷಕರು ತಮ್ಮ ಮಕ್ಕಳ ಮೇಲೆ ಅನೇಕ ನಿರೀಕ್ಷೆಗಳನ್ನಿಟ್ಟುಕೊಳ್ಳುವುದು ಸಹಜ. ಆದರೆ ಮಕ್ಕಳನ್ನು ಕೇವಲ ಅಂಕ ಗಳಿಕೆಯ ಯಂತ್ರಗಳನ್ನಾಗಿ ಮಾಡದೇ ಅವರಲ್ಲಿ ನಿರ್ದಿಷ್ಟ ಕೌಶಲ್ಯವನ್ನು ಬೆಳೆಸುವುದು ಅನಿವಾರ್ಯವಾಗಿದೆ. ಪದವಿಗಿಂತ ಕೌಶಲ್ಯಕ್ಕೆ ಬೆಲೆ ಇದ್ದು, ಸ್ವಾವಲಂಬಿ ಜೀವನ ನಡೆಸಲು ಬೇಕಾಗುವ ಕೌಶಲ್ಯವನ್ನು ವಿದ್ಯಾರ್ಥಿ ಜೀವನದಲ್ಲಿ ಪಡೆಯಬೇಕೆಂದು ಯುವ ನಾಯಕ ಕೃಷ್ಣಗೌಡ ಎಚ್.ಪಾಟೀಲ ಕಿವಿಮಾತು ಹೇಳಿದರು.

ನಗರದ ಜ. ತೋಂಟದಾರ್ಯ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆಯ 46ನೇ ವಾರ್ಷಿಕ 'ಪ್ರತಿಭಾ ಸಂಭ್ರಮ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.



ತೋಂಟದಾರ್ಯ ಶಿಕ್ಷಣ ಸಂಸ್ಥೆಯ ಚೇರಮನ್ ಎಸ್.ಎಸ್. ಪಟ್ಟಣಶೆಟ್ಟರ, ತೋಂಟದಾರ್ಯ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಕೊಟ್ರೇಶ ಮೆಣಸಿನಕಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಖೇಲೋ ಇಂಡಿಯಾ ರಾಷ್ಟ್ರೀಯ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಸಾಧನೆಗೈದ ವಿದ್ಯಾರ್ಥಿನಿ ಭುವನೇಶ್ವರಿ ಕೋಳಿವಾಡ, ಸರಿಗಮಪ ಖ್ಯಾತಿಯ ಗಾಯಕಿ ನಯನಾ ಅಳವಂಡಿ ಹಾಗೂ ರಾಜ್ಯಮಟ್ಟದಲ್ಲಿ ವಿವಿಧ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ಶಾಲೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

> 2023ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ಆಂಗ್ಲ ಮಾಧ್ಯಮ ವಿಭಾಗದಲ್ಲಿ ಸಾಧನೆಗೈದ ಉಷಾಕಿರಣ ತಳವಾರ, ದೀಪಾ ಜಾಲಗಾರ, ಅನುಶ್ರೀ ಕಮತರ ಹಾಗೂ ಕನ್ನಡ ಕವಿತಾ ದೊಡ್ಡಮನಿ, ತುಳಸಿ ಬಡಗೂಳಿಯವರ, ರುಮಾನಾ ಅಣ್ಣಿಗೇರಿ ಇವರಿಗೆ ತಲಾ 10 ಸಾವಿರ ರೂ. ಹಾಗೂ ಪ್ರಶಸ್ತಿ ಫಲಕದೊಂದಿಗೆ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಾನ್ನಿಧ್ಯವನ್ನು ದೊರೆಸ್ವಾಮಿ ವಿರಕ್ತಮಠ ಭೈರನಹಟ್ಟಿ ಹಾಗೂ ತೋಂಟದಾರ್ಯ ಶಾಖಾಮಠ ಶಿರೋಳದ ಪೂಜ್ಯ ಶಾಂತಲಿಂಗ ಮಹಾಸ್ವಾಮಿಗಳು ವಹಿಸಿದ್ದರು. ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಜಿಲ್ಲಾ ಉಪನಿರ್ದೇಶಕ ಎಂ.ಎ. ರಡ್ಡೇರ, ಜೆ.ಟಿ. ವಿದ್ಯಾಪೀಠದ ಸಿಇಓ ಐ.ಬಿ. ಬೆನಕೊಪ್ಪ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಎಸ್.ಜಿ. ಪಲ್ಲೇದ ವೇದಿಕೆಯಲ್ಲಿದ್ದರು. ಅತಿಥಿಗಳಾಗಿ ಶಹರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಬುರಡಿ, ಅವ್ವ ಸೇವಾ ಟ್ರಸ್ಟ್ ಸಂಚಾಲಕ ಬಸವರಾಜ ಧಾರವಾಡ, ನಗರಸಭೆ ಸದಸ್ಯ ಚಂದ್ರು ತಡಸದ, ಉತ್ತರ ಕರ್ನಾಟಕ ಮಹಾಸಭಾ ಅಧ್ಯಕ್ಷ ರವಿಕಾಂತ ಅಂಗಡಿ, ಜ. ತೋಂಟದಾರ್ಯ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಶೇಖಣ್ಣ ಕಳಸಾಪೂರ, ಅಮರೇಶ ಅಂಗಡಿ, ಬಲರಾಮ ಬಸವಾ, ಲಿಂಗರಾಜ ಪಾಟೀಲ ಉಪಸ್ಥಿತರಿದ್ದರು.

### ಲೋಯೋಲಾ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ಯುವ ದಿನಾಚರಣೆ, ಪ್ರಶಸ್ತಿ ಪ್ರದಾನ ಕಾರ್ಯಕ್ರಮ

# ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿರಿ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಾಗೂ ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ ಲೋಯೋಲಾ ಪ್ರೌಢಶಾಲೆ ಗದಗ ಇವರುಗಳ ಸಂಯುಕ್ತ ಆಶ್ರಯದಲ್ಲಿ ಬುಧವಾರದಂದು ಲೋಯೋಲಾ ಪ್ರೌಢಶಾಲೆಯಲ್ಲಿ ಜಿಲ್ಲಾ ಮಟ್ಟದ ರಾಷ್ಟ್ರೀಯ ಯುವ ದಿನಾಚರಣೆ ಮತ್ತು ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಜರುಗಿತು.

ಸಮಾರಂಭ ಉದ್ಘಾಟಿಸಿದ ಡಾ. ಅರುಂಧತಿ ಕೆ ಇವರು ಮಾತನಾಡಿ, ಜಾಗತಿಕವಾಗಿ ಹದಿಹರೆಯದ ವಿದ್ಯಾರ್ಥಿಗಳು ಅನೇಕ ದುಶ್ಚಟಗಳಿಗೆ ಬಲಿಯಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಮಾನಸಿಕ, ದೈಹಿಕ, ಸಾಮಾಜಿಕ ಆರೋಗ್ಯದ ಹಿತಕ್ಕಾಗಿ ಸಮಾಜದಲ್ಲಿ ಒಳ್ಳೆಯ ಸಂಪನ್ಮೂಲ ವ್ಯಕ್ತಿಗಳಾಗಿ ಬೆಳೆಯಬೇಕೆಂದು ಕರೆ ನೀಡಿದರು.

ಇಂದಿನ ಯುವಕರು ಸದೃಢ ಆರೋಗ್ಯವನ್ನು ಹೊಂದಿ, ದೇಶದ ಭವಿಷ್ಯ ರೂಪಿಸುವಲ್ಲಿ ಕೈಜೋಡಿಸಬೇಕೆಂದು ತಿಳಿ ಹೇಳಿದರು. ಹೆಚ್.ಐ.ವಿ. ಏಡ್ಸ್ ಕುರಿತು ಮಾತನಾಡಿ, ಹೆಚ್.ಐ.ವಿ. ನಾಲ್ಕು ಮಾರ್ಗದಿಂದ ಹರಡುತ್ತಿದ್ದು, ಆ ನಾಲ್ಕು ಮಾರ್ಗಗಳನ್ನು ಸುರಕ್ಷಿತ ಉಪಕರಣಗಳನ್ನು ಬಳಸುವ ಮೂಲಕ ಹೆಚ್.ಐ.ವಿ. ಇಂದ ದೂರ ಇರಬೇಕೆಂದು ವಿವರಿಸಿದರು. ಹೆಚ್.ಐ.ವಿ. ಸೋಂಕಿತರಿಗೆ ಶೇ. 10ರಷ್ಟು ತೂಕ ಕಡಿಮೆಯಾಗುವುದು ಹಾಗೂ ನಿರಂತರ ಬೇಧಿಯಾಗುವುದು, ಚರ್ಮದ ಖಾಯಿಲೆಗಳು ಕಾಣಿಸಿಕೊಳ್ಳುವುದು ಹಾಗೂ ಅವಕಾಶವಾದಿ ಸೋಂಕುಗಳು ನಿರಂತರ ಜ್ವರ ಇದ್ದರೆ ಹೆಚ್.ಐ.ವಿ. ಸೋಂಕು ಇರಬಹುದೆಂದು ಶಂಕಿಸಿ ಸರಕಾರಿ ಆಸ್ಪತ್ರೆಯಲ್ಲಿ ಉಚಿತ ತಪಾಸಣೆ ಚಿಕಿತ್ಸೆ ಪಡೆದುಕೊಳ್ಳಲು ತಿಳಿಸಿದರು.




> ರಾಷ್ಟ್ರೀಯ ಯುವ ದಿನಾಚರಣೆ ನಿಮಿತ್ತ ಹೆಚ್.ಐ.ವಿ. ಏಡ್ಸ್ ಕುರಿತು ಭಿತ್ತಿಚಿತ್ರ ಸ್ಪರ್ಧೆಯಲ್ಲಿ ಸರಕಾರಿ ಪ್ರೌಢಶಾಲೆ ಹರ್ಲಾಪೂರದ ಕುಮಾರ ಕೊಟ್ರೇಶ್ ಮುಂಡರಗಿ ಹಾಗೂ ಸಿ.ಡಿ.ಓ. ಜೈನ ಪ್ರೌಢಶಾಲೆಯ ತನುಶ್ರೀ ಹುಚ್ಚಣ್ಣವರ ಪ್ರಥಮ, ಲೋಯೋಲಾ ಪ್ರೌಢಶಾಲೆಯ ಕುಮಾರ ಚಿನ್ಮಯ ಬಂಡಿ ಹಾಗೂ ಜೆ.ಸಿ. ಪ್ರೌಢಶಾಲೆಯ ಜೈಲಾ ಖಾಜಿ ದ್ವಿತೀಯ, ನಗರಸಭೆ ಪ್ರೌಢಶಾಲೆಯ ಕುಮಾರಿ ಐಶ್ವರ್ಯ ಆಲೂರ ತೃತೀಯ ಸ್ಥಾನಗಳಿಸಿದರು ವಿಜೇತರಿಗೆ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು.

ಜಿಲ್ಲಾ ಐಸಿಟಿಸಿ ಮೇಲ್ವಿಚಾರಕರಾದ ಬಿ.ಬಿ. ಲಾಳಗಟ್ಟಿ ಮಾತನಾಡಿ, ರಾಷ್ಟ್ರೀಯ ಯುವ ದಿನಾಚರಣೆಯ ಮಹತ್ವವನ್ನು ತಿಳಿಸುತ್ತಾ, ಇಂದಿನ ಯುಗದಲ್ಲಿ ಯುವಕರು ಆರೋಗ್ಯ ಅರಿವು ಮೂಡಿಸಿ, ಶಿಕ್ಷಣವನ್ನು ಪರಿವರ್ತಿಸುವುದು ಎನ್ನುವ ಘೋಷ ವಾಕ್ಯದೊಂದಿಗೆ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಶಿಕ್ಷಣ ಹೆಚ್ಚು ಪ್ರಸ್ತುತವೆಂದರು. ಯುವಕರು ಸನ್ನಡತೆಯನ್ನು ಅಳವಡಿಸಿಕೊಳ್ಳಬೆಂದು ತಿಳಿಸಿದರು. ವಿಶ್ವದ ಇತಿಹಾಸದಲ್ಲಿ ಸ್ವಾಮಿ ವಿವೇಕಾನಂದರು ಯುವಕರ ಕಣ್ಮಣಿಯಾಗಿದ್ದು ಅವರು ಹೇಳುವಂತೆ ಪ್ರಯತ್ನವೆಂಬ ಚಂದ್ರನ್ನನ್ನು ಬೆಳಗಿಸಿದಂತೆ ಯಶಸ್ಸೆಂಬ ಬೆಳದಿಂಗಳು ಸಿಗುತ್ತದೆ ಎಂದರು.

ನಂತರ ಪ್ರೌಢಶಾಲೆಯ ಪ್ರಾಚಾರ್ಯರಾದ ಶ್ರೀಮತಿ ರೇನಿತಾ ರವರು ಅಧ್ಯಕ್ಷೀಯ ನುಡಿಗಳಲ್ಲಿ ಮಾತನಾಡಿ ಇಂದಿನ ಯುವಕರು ದುಶ್ಚಟಗಳಿಂದ ದೂರವಿರಬೇಕೆಂದು ಹಾಗೂ ಸನ್ನಡತೆಯನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು..

ಸಮಾರಂಭದಲ್ಲಿ ಲೋಯೋಲಾ ಪ್ರೌಢಶಾಲೆಯ ಶಿಕ್ಷಕರಾದ ಶ್ರೀಮತಿ ಜಯಶ್ರೀ, ಹರ್ಲಾಪೂರ, ನಗರಸಭೆ ಹಾಗೂ ಸಿ.ಡಿ.ಓ. ಜೈನ ಪ್ರೌಢಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.

ಕುಮಾರಿ ಜ್ಯೋತ್ನಾ ಪ್ರಾರ್ಥಿಸಿದರು. ಪ್ರೌಢಶಾಲೆಯ ಶ್ರೀಮತಿ ಜಯಶ್ರೀ ಸ್ವಾಗತಿಸಿದರು. ಕುಮಾರಿ. ಶಫೀಕಾ ಕಾರ್ಯಕ್ರಮವನ್ನು ನಿರೂಪಿಸಿದರು. ಕುಮಾರಿ ಪೂಜಾ ವಂದಿಸಿದರು.

## ದಾಖಲೆಯೊಂದಿಗೆ ಆರೋಪ ಸಾಬೀತುಪಡಿಸಿ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ



2024–25ನೇ ಸಾಲಿನ ಬಜೆಟ್ ಆಯ–ವ್ಯಯ ಅಂದಾಜು ಪತ್ರಿಕೆ ತಯಾರಿಸಲು ಸಲಹೆ–ಸೂಚನೆ ನೀಡಲು ಪ.ಪಂ ಕಾರ್ಯಾಲಯದಲ್ಲಿ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಅವ್ಯವಹಾರ ಜರುಗಿದೆ ಎಂದು ಸದಸ್ಯ ಫಕ್ಕೀರೇಶ ರಟ್ಟಿಹಳ್ಳಿ ಆರೋಪಿಸಿದ್ದು, ದಾಖಲೆ ಸಮೇತ ಸಾಬೀತು ಪಡಿಸಬೇಕೆಂದು ಶಿರಹಟ್ಟಿ ಪಟ್ಟಣದ ಅಭಿವೃದ್ಧಿ ಹಾಗೂ ಜನಹಿತ ಸ್ಪಂದನಾ ಸಮಿತಿ ಅಧ್ಯಕ್ಷ ಜಯತೀರ್ಥ ರಾ.ಕುಲಕರ್ಣಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣ ಪಂಚಾಯತಿಯಲ್ಲಿ ಭ್ರಷ್ಟಾಚಾರ ಜರುಗಿದರೆ ಅವರು ಮಾಡುತ್ತಿರುವ ಹೋರಾಟಕ್ಕೆ ನಮ್ಮ ಬೆಂಬಲ ಸದಾ ಇರುತ್ತದೆ. ಪಂಚಾಯಿತಿ ವಿರುದ್ಧ ಪದೇ ಪದೇ ಇಂತಹ ಆರೋಪಗಳನ್ನು ಮಾಡಿದರೆ ಅಧಿಕಾರಿಗಳು ಸೇವೆಗೆ ಬರಲು ಹಿಂಜರಿಯುತ್ತಾರೆ. ವೃಥಾ ತೊಂದರೆ ಅಥವಾ ಆರೋಪ ಮಾಡುವುದು ಸಮಂಜಸವಲ್ಲ. ಲೋಪಗಳು ಕಂಡುಬಂದರೆ ಸ್ವತಃ ಅಧಿಕಾರಿಗಳನ್ನು ಭೇಟಿಯಾಗಿ ಚರ್ಚಿಸುವುದು ಸೂಕ್ತ. ಅಂದಿನ ಸಭೆಯಲ್ಲಿ ಹಾಜರಿದ್ದ ಪ.ಪಂ ಸದಸ್ಯರು ಭ್ರಷ್ಟಾಚಾರದ ಕುರಿತು ನೀಡಿದ ಹೇಳಿಕೆಗೆ ಮೌನ ವಹಿಸಿರುವುದನ್ನು ನೋಡಿದರೆ ಇವರ ನಡೆ ಭ್ರಷ್ಟಾಚಾರದ ಪರವೋ ಅಥವಾ ವಿರುದ್ಧವೋ ಎಂಬುದನ್ನು ಸದಸ್ಯರೇ ತಿಳಿಸಬೇಕೆಂದು ಆಗ್ರಹಿಸಿದರು.

## ಪೆಂಡಾಲ ಮಾಲೀಕರ ಸಂಘದ ಪದಾಧಿಕಾರಿಗಳ ಆಯ್ಕೆ



■ವಿಜಯಸಾಕ್ಷಿ ಸುದ್ದಿ, ಡಂಬಳ

ರೋಣ ಪಟ್ಟಣದಲ್ಲಿ ಜರುಗಿದ ಗದಗ ಜಿಲ್ಲಾ ಪೆಂಡಾಲ ಮಾಲೀಕರ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ಗೌರಾವಧ್ಯಕ್ಷರನ್ನಾಗಿ ಮುತ್ತಣ್ಣ ತವರಿ, ಅಧ್ಯಕ್ಷರಾಗಿ ಮಹ್ಮದಗೌಸ ತಾಂಬೋಟಿ, ಉಪಾಧ್ಯಕ್ಷರಾಗಿ ಶಿವಾನಂದ ಬನಹಟ್ಟಿ, ಕಾರ್ಯದರ್ಶಿಯಾಗಿ ವಿಜಯಕುಮಾರ ಹಂದ್ರಾಳ, ಖಜಾಂಜಿಯಾಗಿ ಮಲ್ಲಣ್ಣ ಮಾಳಶೆಟ್ಟಿ, ಸಂಘಟನಾ ಕಾರ್ಯದರ್ಶಿಯಾಗಿ ಶ್ರೀಕಾಂತ ತಾಳಿಕೋಟಿ, ಸಹ ಕಾರ್ಯದರ್ಶಿಯಾಗಿ ವಾಸು ಕಲಘಟಗಿ, ಮುಸ್ತಾಕ ಸುರಣಗಿ, ಜಿಲ್ಲಾ ಸದಸ್ಯರಾಗಿ ಉಮೇಶ ಮಾಂಡ್ರೆ, ದೇವಪ್ಪ ಉರಗ, ಸಲೀಮ್ ಬಾಂಬೆ, ಬಸವರಾಜ ಸನ್ನೊಲಿ, ಜಾವಿದ್ ಸಕಲಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ವಿವಿಧ ತಾಲೂಕಿನ ಗ್ರಾಮೀಣ ಭಾಗದ ಪೆಂಡಾಲ ಮಾಲೀಕರು ಇದ್ದರು ಎಂದು ನೂತನ ಅಧ್ಯಕ್ಷ, ಮುಂಡರಗಿ–ಡಂಬಳ ಗ್ರಾಮದ ಕೆಜಿಎನ್ ಪೆಂಡಾಲ ಮಾಲೀಕರಾದ ಮಹ್ಮದಗೌಸ ಬಿ.ತಾಂಬೋಟಿ ಪ್ರಕಟಣೆಗೆ ತಿಳಿಸಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka